ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಯಿತು, ನಾಳೆ ಚರ್ಚೆ ಮಾಡೋಣ ಬಿಡಿ.

ಅಧ್ಯಕ್ಷರು: .....ಅದಕ್ಕೋಸ್ಕರವೇ ಈಗ ಸಮಯ ಬೇಕೆಂದು ಹೇಳುತ್ತಿದ್ದಾರೆ. ಮಂತ್ರಿಗಳೆ, ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ಶಿವಕುಮಾರ್‌ರವರೆ, ಅವರನ್ನು ಹೆದರಿಸಬೇಡಿ. ಅವರು ಹೊಸಬರು. ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಅವರೂ ಅಭ್ಯಾಸ ಮಾಡಿಕೊಂಡು ಬರುತ್ತಾರೆ. ನೀವೂ ಸ್ವಲ್ಪ ಅದರ ಬಗ್ಗೆ ನೋಡಿ, ಯಾವ ಕಾರಣಕ್ಕೋಸ್ಕರ ವಿಶ್ವವಿದ್ಯಾನಿಲಯದ ಅಗತ್ಯತೆ ಇದೆ ಎನ್ನುವುದನ್ನು ನೀವೂ ಮನದಟ್ಟು ಮಾಡಿಕೊಡಬೇಕು. ಇದನ್ನು ಬೆಳಿಗ್ಗೆ ತೆಗೆದುಕೊಳ್ಳೋಣ.

3. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ.

ವಿಷಯ: "ಅಕ್ಷರ ದಾಸೋಹ" ಕಾರ್ಯಕ್ರಮವನ್ನು ಖಾಸಗಿ ಏಜೆನ್ಸಿಗೆ ನೀಡಿರುವ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ದಿನಾಂಕ 13.4.2007 ರಂದು ನಾನು ಈ ಸಭೆ ಮುಂದೆ 'ಅಕ್ಷರ ದಸೋಹ' ನಡೆಯುವ ಕಡೆ ಏನು ಖಾಸಗಿಯವರಿಗೆ ವಹಿಸಿಕೊಟ್ಟಿದ್ದೀರಿ, ಆ ಸಂಸ್ಥೆ ಸರ್ಕಾರ ಒಂದು ಏಜೆನ್ಸಿಯೆಂದು ಕೊಡುವ ಸಂಸ್ಥೆಯಲ್ಲ ಮತ್ತು ಸಾವಿರಾರು ಜನ ಹೆಣ್ಣು ಮಕ್ಕಳನ್ನು ಉದ್ಯೋಗರಹಿತರನ್ನಾಗಿ ಮಾಡಿದ್ದೀರೆಂದು ಈ ಸಭೆ ಮುಂದೆ ನಾನು ಬೇಕಾದಷ್ಟು ವಿಷಯಗಳನ್ನು ಮಾತನಾಡಿದ್ದೇನೆ. ಅದರ ಪ್ರಕಾರ ನಾವು ತನಿಖೆ ಮಾಡುತ್ತೇವೆಂದು ಅವತ್ತು ಸರ್ಕಾರ ಬಹಳ ಪೌರುಷವಾದ ಉತ್ತರ ಕೊಟ್ಟಿತು. ಕೊನೆಯಲ್ಲಿ ಮಿನಿಸ್ಟರ್ ಉತ್ತರ ಕೊಟ್ಟಿದ್ದು. "ಈ ವಿಚಾರದಲ್ಲಿ ಯಾವುದೇ ತರಹದ ಅನಮಾನ ಬೇಡ. ಸ್ಪಷ್ಟವಾದ ನಿಲುವಿಗೆ ಸರ್ಕಾರ ಬರುತ್ತದೆ. ತನಿಖೆ ಆರಂಭಿಸುವುದಕ್ಕೆ, ಯಾವ ರೀತಿಯ ತನಿಖೆ ಮಾಡಬೇಕೆನ್ನುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಮತ್ತೆ ತತ್‌ಕ್ಷಣ ಏನು ಕ್ರಮಗಳನ್ನು ಕೈಗೊಳ್ಳಬೇಕೋ, ಅದರ ಬಗ್ಗೆ ನನಗೆ ಈಗಾಗಲೇ ಗೃಹ ಸಚಿವರು ಒಂದು ಪತ್ರ ಕಳುಹಿಸಿ, ನೀವು ಸ್ಪಷ್ಟವಾದ ಉತ್ತರ ಕೊಡಿ, ಅದರ ಬಗ್ಗೆ ನಾಳೆ ನಾವು–ನೀವು ಮುಖ್ಯಮಂತ್ರಿಗಳೊಂದಿಗೆ ಕುಳಿತು ಮಾತನಾಡಿ, ಸ್ಪಷ್ಟವಾದ ನಿಲುವನ್ನು ಸದಸ್ಯರಿಗೆ ಮತ್ತು ಪತ್ರಿಕೆಗಳಿಗೆ ತಿಳಿಸೋಣವೆಂದು ಅವರು ತಿಳಿಸಿದ್ದಾರೆ. ದಯಮಾಡಿ ಈ ಬಗ್ಗೆ

ಮಾಧುಸ್ವಾಮಿಯವರು ಏನು ಹೇಳಿದ್ದಾರೆ, ಈ ರಾಜ್ಯದ ಜನಹಿತ ದೃಷ್ಟಿಯಿಂದ, ಇದು ರಾಜ್ಯದ ಗೌರವದ ವಿಚಾರವೆಂದು ಕೂಡ ಸರ್ಕಾರ ಪರಿಗಣಿಸುತ್ತದೆ. ಬಹಳ ಗಂಭೀರವಾದ ರೀತಿಯಲ್ಲಿ ಈ ವಿಚಾರದಲ್ಲಿ ಸರ್ಕಾರ ಹೆಜ್ಜೆ ಇಡುತ್ತದೆಂದು ಸದಸ್ಯರಿಗೆ ನಾನು ತಮ್ಮ ಮೂಲಕ ತಿಳಿಸಲು ಇಚ್ಛಿಸುತ್ತೇನೆ." ಇದು ಅವತ್ತು ಸರ್ಕಾರ ಕೊಟ್ಟ ಉತ್ತರ. ಈ ವಿಷಯ ಅವತ್ತಿನಿಂದ ಇವತ್ತಿನವರೆಗೆ ಈ ಮನೆಯ property ಆಯಿತು. ಈ ಮನೆಗೆ ಸೇರಿದ ಒಂದು ವಸ್ತುವಾಯಿತು. ಇದಾದ ನಂತರ, ಇದುವರೆಗೂ ಈ ವಿಷಯದಲ್ಲಿ ಯಾವುದೇ ತನಿಖೆಯಾಗಲಿಲ್ಲ. ಯಾವುದೇ ರೀತಿಯಾದ ಮಾಹಿತಿಯನ್ನು ಈ ಸಭೆಗೆ ಕೊಟ್ಟಿಲ್ಲ. ಈ ಸಭೆಯಲ್ಲಿ ಯಾರು ಮಾತನಾಡುತ್ತಾರೆ, ಏನು ಮಾತನಾಡುತ್ತಾರೆ ಎಂಬುದು ಮುಖ್ಯವಲ್ಲ. ಮಾತನಾಡಿದ ನಂತರ ಅದು ಈ ಸಭೆಯ ಅಭಿಪ್ರಾಯ ಅಥವಾ ಸಭೆಯ ತೀರ್ಮಾನವೆಂದು ಮನಗಂಡು, ಅದಕ್ಕೆ ಏನು ಗೌರವ ಕೊಡಬೇಕಾಗಿತ್ತು, ಅದನ್ನು ಮೀರಿ ಸರ್ಕಾರ, ಯಾವ ವ್ಯಕ್ತಿ ಮೇಲೆ ನಾವು ಇಲ್ಲಿ ಆಪಾದನೆಗಳನ್ನು ಮಾಡಿದ್ದೆವು, ಆ ವ್ಯಕ್ತಿ ಈ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಲಾಯಕ್ಕಾಗಿಲ್ಲವೋ, ಯಾವ ವ್ಯಕ್ತಿಯ antecedents ಅನ್ನು ನಾವು question ಮಾಡಿದ್ದೆವು ಅವರಿಗೆ ಕೊಟ್ಟಿದೆ. ಅವೆಲ್ಲಾ ಪುರಾವೆಗಳನ್ನು ನಾವು ನಿಮ್ಮ ಮುಂದೆ ಮಂಡಿಸಿದ್ದೆವು. ಅದ್ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೇ, ಲೆಕ್ಕಕ್ಕೆ ತೆಗೆದುಕೊಳ್ಳದೇ, ಶಾಸನ ಸಭೆಯಲ್ಲಿ ಗಂಟೆ ಗಟ್ಟಲೆ ಆದ ಚರ್ಚೆಯನ್ನು ಲೆಕ್ಕಿಸದೆ, ದಿಢೀರ್ ಎಂದು ಈ ಅಕ್ಷರ ದಾಸೋಹದ ಜೊತೆಗೆ ಅಲ್ಲಿದ್ದ ಮಕ್ಕಳ ಸಂಖ್ಯೆಯನ್ನು ಜಾಸ್ತಿ ಮಾಡಿ, ಅದರ ನಂತರ ಜೈಲಿನಲ್ಲಿರುವ ಕೈದಿಗಳಿಗೆ ನಾವು ಅವರಿಂದಲೇ ಅಡುಗೆ ಮಾಡಿಸುತ್ತೇವೆ, ಊಟ ಕೊಡಿಸುತ್ತೇವೆಂದು ನರ್ಧಾರ ತೆಗೆದುಕೊಂಡಿದ್ದಾರೆ. ಆ ನಿರ್ಧಾರ ಕೈಗೊಳ್ಳಬೇಕಾದರೆ ಒಂದು news ಆಗಿದೆ. Deccan Herald 22nd "Coming down heavily on the critics of the Mid Day meal scheme he said the scheme would be extended to prisoners in Bellary, Hindalga, Dharwad and Mysore also in addition to Banglalore." ಎಂದು ಮಾನ್ಯ ಗೃಹ ಸಚಿವರು ಹೇಳಿಕೆ ಕೊಟ್ಟರು ಎಂದು ಹೇಳಿ ಅವತ್ತು news ಆಗಿದೆ. ನಾನು ಇವತ್ತು ತಮ್ಮ ಮುಂದೆ ಎತ್ತಿರುವ ವಿಷಯ ನೂರಕ್ಕೆ ನೂರು ಈ ಸಭೆಯ contempt

ಆಗುತ್ತದೆ. ಈ ಸಭೆಯ ಮುಂದೆ ಏನು ಚರ್ಚಾ ವಸ್ತುವಾಗಿತ್ತು ಅದನ್ನು ಮೀರಿ ಕಾನೂನನ್ನೂ ಮೀರಿ Prisons Manual ಮೀರಿ Home minister ಅಥವಾ Jail minister ರವರು ಇವತ್ತು ಮಿಡ್ಡೇ ಮೀಲನ್ನು ಅವರಿಗೆ ವಹಿಸಿಕೊಟ್ಟಿದ್ದಾರೆ. ಇದರಿಂದ ಏನಾಗಿದೆ ಎಂದರೆ ನಾವು ಇಲ್ಲಿ ಕಂಠ ಶೋಷಣೆ ಮಾಡುವವರು ಮಾಡಿಕೊಳ್ಳುತ್ತಲೇ ಇರಬಹುದು. ಕಾರ್ಯಕ್ರಮ ಮಾಡುವವರು, ಸರ್ಕಾರದ ತೀರ್ಮಾನ ತೆಗೆದುಕೊಳ್ಳುವವರು ತೆಗೆದುಕೊಳ್ಳುತ್ತಲೇ ಹೋಗಬಹುದು. ಇಲ್ಲಿ ಆಡುವ ಯಾವುದೇ ಮಾತಿಗೆ ಬೆಲೆ, ಮಹತ್ವ ಇಲ್ಲ ಎನ್ನುವ ಪ್ರಶ್ನೆ ಈ ಸಭೆಯ ಮುಂದೆ ನಿಂತಿದೆ. ಅದರ ಗೌರವ ಘನತೆ ಕಾಪಾಡುವುದನ್ನು ನಾನು ತಮಗೇ ಬಿಟ್ಟು ಬಿಡುತ್ತೇನೆ. ಇದರಲ್ಲಿ ಎರಡೇ ಎರಡು ವಿಷಯಗಳನ್ನು ನಾನು quote ಮಾಡುತ್ತೇನೆ. ಕರ್ನಾಟಕ Prisons Manual 1978 ಅನ್ನು ಓದುತ್ತೇನೆ chapter…..

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿ ಹಕ್ಕುಚ್ಯುತಿ ಆಗುತ್ತದೋ ಇಲ್ಲವೋ ಎಂಬ ಬಗ್ಗೆ ಚರ್ಚೆ ಆಗಬೇಕೆ ವಿನಃ ಈ ಸದನದಲ್ಲಿ ಕೊಟ್ಟ ಭಾಷೆ ಏನು ಅದಕ್ಕೆ ವ್ಯತಿರಿಕ್ತವಾಗಿ ನಡೆದಿರುವುದು ಏನು ಎಂಬುದನ್ನು ತಮ್ಮ ಗಮನಕ್ಕೆ ತರಬೇಕು. ಇಂಥ ಹಕ್ಕುಚ್ಯುತಿ ಆಗುವುದಿಲ್ಲವೆಂದ ಇದೇ ಪೀಠದ ಮೂಲಕ ಇದೇ ಸದನದಲ್ಲಿ ಅನೇಕ ತೀರ್ಪುಗಳನ್ನು ಕೊಟ್ಟಿರತಕ್ಕದು ಇದೆ. ಆದ್ದರಿಂದ ಅದನ್ನು ಮಾಡಿ. Manual ಓದಬೇಕಾದ ಅಗತ್ಯ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ನೋಟೀಸ್‌ನಲ್ಲಿ ಹೇಳಿದ್ದೇನೆ. ಆವತ್ತು ಸದನಕ್ಕೆ ಕೊಟ್ಟಿರುವ ಭಾಷೆಯನ್ನು ಅಥವಾ ಭಾಷಣವನ್ನು ತಮಗೆ ಓದಿ ಹೇಳಿದ್ದೇನೆ. ಯಾವ ವ್ಯಕ್ತಿ ಮೇಲೆ ತಕ್ಷಣ enquiry ಮಾಡುತ್ತೇವೆ, ಕ್ರಮ ಜರುಗಿಸುತ್ತೇವೆ ಎಂದು ಆವತ್ತು ಹೇಳಿದ್ದಾರೆ. ಆದರೆ ಅದೇ ವ್ಯಕ್ತಿಯ ಜೊತೆ ಸರ್ಕಾರದ ಉನ್ನತ ಸಚಿವರು ಕುಳಿತುಕೊಂಡು ಕಾರ್ಯಕ್ರಮಗಳನ್ನು ಮಾಡಿ ಅವರ ಜೊತೆಯೇ ಸರ್ಕಾರದ ಇನ್ನಷ್ಟು ಕಾರ್ಯಕ್ರಮಗಳನ್ನು ಕೊಟ್ಟು ಅವರಿಗೇ ಪ್ರೋತ್ಸಾಹ ಮಾಡುತ್ತಿರುವುದು ಏನಾಗುತ್ತದೆ ಎಂಬುದನ್ನು ತಮಗೆ ಬಿಟ್ಟು ಒಂದನೆ ಚಾಪ್ಟರ್‌ನಲ್ಲಿ ನಾನು ಹೇಳಿದ್ದೇನೆ. ಎರಡನೆಯದು ಏನಾಗಿದೆ ಅದನ್ನೂ ಹೇಳಬೇಕಲ್ಲ. ಕಾನೂನನ್ನು ಮೀರಿ ಸಹ ಕೊಡುವ ಪರಿಸ್ಥಿತಿ ಏನು ನಿರ್ಮಾಣವಾಗಿತ್ತು ಎಂದು ಹೇಳುತ್ತಿದ್ದೇನೆ. Prisons Manual ಏಕೆ ಓದಲು ಹೊರಟೆ, Prisons Manual ಮಾಡಿಕೊಟ್ಟಿರುವುದು ಈ ಸರ್ಕಾರವೇ.

Prisons Manual ಈ ಸಭೆಯ ಅಧೀನಕ್ಕೆ ಒಳಪಟ್ಟಿದೆ. ಅದರಲ್ಲಿ dietary ಎಂಬ ಚಾಪ್ಟರ್ ಹಾಕಿಕೊಂಡಿರುವವರು ನೀವೇ, ನಾನಲ್ಲ. ಅವರಿಗೆ ಹೇಗೆ ಊಟ ಉಪಚಾರ ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿರುವುದು ಈ ಸರ್ಕಾರವೇ, ಡೈಯಟ್ ಹೇಗಿರಬೇಕು, ಯಾರು ಮಾಡಬೇಕು, ಏನು ಮಾಡಬೇಕು ಇದು ಅಮೆಂಡ್ ಆಯಿತೆ? ನಾನು ನಿಯಮ 375 ನ್ನು ಓದುತ್ತಿದ್ದೇನೆ. "All food except that specially prepared for Prisoners in Hospitals, first class Prisoners, Civil and State Prisoners shall be cooked at the main kitchen." Prisons code ನ್ನು ನಿಮ್ಮದೇ ಮ್ಯಾನ್ಯುಯಲ್‌ನಲ್ಲಿ ಮಾಡಿಕೊಂಡಿದ್ದೀರಿ. shall be ಎಂಬ ಕಡೆ How can you award it to somebody else from outside ಎಂಬುದು ನನ್ನ ಪ್ರಶ್ನೆ. All food shall be carefully protected from fire ನಂತೆ, ಡೈಯಟ್‌ಗೆ ಬಂದಾಗ ಏನೇನು ಕೊಡಬೇಕು? Mutton without bones 115 grams per prisoners shall be issued once a week to Non-vegetarian prisoners, Mutten when cooked shall weigh 90 grams. Non-vegetarian Prisoners who take mutton are not eligible for Dal, ಹಾಗೇ ಹೇಳಿಕೊಂಡು, ಯಾವ್ಯಾವ ದಿವಸ ಎಂಥೆಂತಹ ಊಟ ಕೊಡಬೇಕು ಎಂದು ನಯಮ ಮಾಡಿದ್ದೀರಿ. ರಾಮನವಮಿಯಲ್ಲಿ, ಕೃಷ್ಣ ಜನ್ಮಾಷ್ಟಮಿ ದಿವಸ, ಏಕಾದಶಿ ದಿವಸ, ಮಹಾ ಶಿವರಾತ್ರಿಯಲ್ಲಿ, last Saturday of the month of ಶ್ರಾವಣದಲ್ಲಿ, Independence Day ನಲ್ಲಿ ಏನು ಮಾಡಬೇಕು inspection of cooked food ಯಾರು ಮಾಡಬೇಕು, daily inspective of food supplies ಯಾರು ಮಾಡಬೇಕು, milk, butter milk ಯಾರು ಕೊಡಬೇಕು, ಎಂದು ನಿಯಮ ಇದೆ. "The Superintedent and Medical Officer shall exercise utmost vigilance in the supervision of the food supplies and all articles issued for consumption shall be inspecting daily by the Medical Officer. The Inspecting Officer shall especially see that the full ration of vegetables of good quality is issued and any defect in quality is brought to the notice of the Superintendent." Food ಕೊಡಲು ನಿಮಗೆ ಅವಕಾಶ ಇಲ್ಲ. Food prepare

ಮಾಡುವ ವೆಜಿಟಬಲ್ಸ್ articles ನ್ನು ಮಾತ್ರ ನೀವು supply ಮಾಡಬೇಕಾಗಿರುವುದು. ಯಾರ್ಯಾರು ಅಡುಗೆ ಮಾಡಬೇಕು ಯಾವ ರೀತಿ ಅಡುಗೆ ಮಾಡಿಸಬೇಕು ಎಂಬುದನ್ನು ನಿಮ್ಮ ಮ್ಯಾನ್ಯುಯಲ್ ನಿಗದಿ ಮಾಡಿಬಿಟ್ಟಿದೆ. ಪ್ರತಿ 25 ಜನಕ್ಕೆ ಒಬ್ಬ ಕುಕ್‌ನ್ನು ಆಯ್ಕೆ ಹೇಗೆ ಮಾಡಬೇಕು ಎಂದು ನಿಗದಿ ಮಾಡಿದೆ. ಅಲ್ಲೇ ಕುಕ್ ಮಾಡಬೇಕು. Half-an-hour ಒಳಗೇ serve ಮಾಡಬೇಕು. ಅವನಿಗೆ unless he is in the hospital ಹೊರಗಡೆ ಊಟದ ಅವಶ್ಯಕತೆ ಇಲ್ಲ ಎಂದು ಹೇಳಿದೆ. ಇಲ್ಲಿ ಮೂಲಭೂತ ಪ್ರಶ್ನೆ ಒಂದು ಜೈಲಿನಲ್ಲಿ ಒಂದೇ ಧರ್ಮದವರು ಇರುವುದಿಲ್ಲ. ಒಂದೇ ರೀತಿ ಊಟ ಮಾಡುವವರು ಇರುವುದಿಲ್ಲ. ಒಂದು ಜೈಲಿನಲ್ಲಿ ಈರುಳ್ಳಿ ತಿನ್ನುವವರು ಇರುತ್ತಾರೆ, ಇಂಗು ತಿನ್ನುವವರು ಇರುತ್ತಾರೆ, ಬೆಳ್ಳುಳ್ಳಿ, ನಾನ್ ವೆಜಿಟೇರಿಯನ್ ತಿನ್ನುವವರು ಇರುತ್ತಾರೆ. How can we do this? ಆ ಜೈಲಿನಲ್ಲಿ ಯಾವ್ಯಾವ ಖೈದಿಗಳಿಗೆ ಏನೇನು ಆಧಾರ ಇದೆ, ಯಾವ್ಯಾವ ಖೈದಿಗಳು ಏನೇನು ಊಟ ಮಾಡಬೇಕು ಆ ಆಧಾರದಲ್ಲೇ ಅಡುಗೆ ಮಾಡಿಸಿ ಊಟಕ್ಕೆ ಹಾಕಿಸಬೇಕು ಎಂದು ನಿಯಮವನ್ನೂ ಮೀರಿ ಯಾವ ವ್ಯಕ್ತಿಯನ್ನು ನೀವು ಸರ್ಕಾರ ಒಂದು ದೊಡ್ಡ scandalನ್ನು issue raise ಮಾಡಿದ್ದೀರಿ, we are with the Hon'ble member ನಾವು ಇದನ್ನು ತನಿಖೆ ಮಾಡುತ್ತೇವೆಂದು ಹೇಳುತ್ತೀರಿ, ಆದರೆ ಅವರಿಗೆ ನೀವು ಇವತ್ತು award ಮಾಡುತ್ತಿದ್ದೀರಿ. ನಮ್ಮ main issue ಆತನ ಬಗ್ಗೆ ನಾವು ಏನು ಚಾರ್ಜ್ ಮಾಡಿದ್ದೇವೆ ನಮ್ಮ ಹತ್ತಿರ ಇರುವ ಮಾಹಿತಿಯನ್ನು ನೀವು ತೆಗೆದುಕೊಳ್ಳಬೇಕು. ನಾನು ಒಂದು ಮಾತನ್ನು ಮುಂದಕ್ಕೆ ಹೋಗಿ ಹೇಳಬೇಕಾಗುತ್ತದೆ. ಅವರು ನಮಗೆ ಕನ್ವಿನ್ಸ್ ಮಾಡಲು ಪ್ರಯತ್ನ ಮಾಡಿದರು. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ಅವರ ಎಲ್ಲಾ ಯೋಜನೆಗಳನ್ನು ತೋರಿಸಿದರು. ನಾನು ಒಂದೇ ಒಂದು ಮಾತನ್ನು ಹೇಳಿ ಬಂದೆ, ಇದೆಲ್ಲವನ್ನು ಸರ್ಕಾರ ನಡೆಸುವವರಿಗೆ ಕನ್ವಿನ್ಸ್ ಮಾಡಿ. ನನಗೆ ಸಿಕ್ಕಿದ ಮಾಹಿತಿಯ ಆಧಾರದ ಮೇಲೆ ನಾನು ಮಾತನಾಡಿದ್ದೇನೆ. ನೀವು ಅವರನ್ನು ಕನ್ವಿನ್ಸ್ ಮಾಡಿ, ಅವರು ಬಂದು ಹೌಸ್‌ನಲ್ಲಿ ಉತ್ತರ ಹೇಳಲಿ. ಇಲ್ಲ ನೀವು ಅವತ್ತು ಏನು ಹೇಳಿದ್ದೀರಿ ನಾವು ತನಿಖೆಗೆ ಒಳಪಡಿಸಿದ್ದೇವೆ ತನಿಖೆಯಿಂದ ಇಂಥ ಅಂಶ ಬೆಳಕಿಗೆ ಬಂದಿದೆ ಎಂದು ನಮಗೆ ಹೇಳಬೇಕಲ್ಲ, ಈ ಸಭೆಗೆ ಹೇಳಬೇಕಲ್ಲ? ತಾವು ಒಂದು

ದಿವಸ ಇಲ್ಲಿ ಮಾತನಾಡುತ್ತ ಸಿಟ್ಟಿನಲ್ಲಿ ಒಂದನ್ನು ಹೇಳಿದಿರಿ. ಇಲ್ಲಿ ಏನು ಮಾತುಕೊಟ್ಟು ಹೋಗುತ್ತೀರಿ ಅದೆಲ್ಲ ಪ್ರಿವಿಲೇಜ್ ಆಗುತ್ತದೆ, ಮಂತ್ರಿಗಳು ಎಚ್ಚರಿಕೆಯಿಂದ ಇರಿ ಎಂದು. ಈ ಮಾತು ಕೂಡ ಈ ಸಭೆಯಲ್ಲಿ ಕೊಟ್ಟಿರುವ ಮಾತು. ನಿಮ್ಮದೇ ಕಡತದ extract ನಿಂದ ಮಾತನಾಡುತ್ತಿದ್ದೇನೆ. ಅವರ ಮೇಲೆ ನಾವು ತಕ್ಷಣ ತನಿಖೆ ಮಾಡುತ್ತೇವೆ ಎಂದು ಸರ್ಕಾರ ಆ ಕೆಲಸವನ್ನು ಮಾಡುವುದನ್ನು ಬಿಟ್ಟು ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಅವರಿಗೆ ಕೊಡುತ್ತಿದೆ. ನಾನು ಏಕೆ ಇದನ್ನು ಪ್ರಿವಿಲೇಜ್ ಎಂದು ಹೇಳುತ್ತೇನೆ? It becomes privilege. ಯಾವ ವ್ಯಕ್ತಿಗೆ ನಾವು ಇಲ್ಲಿ charge ಮಡಿದ್ದೇವೆ ಆ ವ್ಯಕ್ತಿಗೆ ಪ್ರೋತ್ಸಾಹಕವಾದ ಕೆಲಸವನ್ನು ಯಾರಾದರು ಇನ್ನೊಬ್ಬರು ವ್ಯಕ್ತಿ ಮಾಡುತ್ತಿದ್ದರೆ it is contempt and privilege of the House. ಯಾವ ವ್ಯಕ್ತಿ ಬಗ್ಗೆ ನಾವು ಇಲ್ಲೇ ಚರ್ಚೆ ಮಾಡಿ ಆತ ತನಿಖೆಗೆ ಒಳಪಡಬೇಕೆಂದು ಇಲ್ಲಿ ಮಾತನಾಡಿರುತ್ತೇವೆ ಅವನ ಜೊತೆಯಲ್ಲೇ ನೀವು ಕುಳಿತುಕೊಳ್ಳುವುದು, ಅವನ ಜೊತೆಯಲ್ಲೇ ಮಾತನಾಡುವುದು, ಅವರನ್ನೇ ನಿಮ್ಮ ಸರ್ಕಾರಿ ಕಾರ್ಯಕ್ರಮಗಳಿಗೆ guest ಆಗಿ ಕರೆದುಕೊಂಡು ಬರುವುದು, ಅವರಿಂದಲೇ ಅಡುಗೆ ಮಾಡಿಸಿ ಊಟಕ್ಕೆ ಇಡುತ್ತೇವೆ, ಯಾರು ಏನೇ ಹೇಳಲಿ ನಾವು ಈ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳುವುದೇ ಆದರೆ ಈ ಶಾಸನ ಸಭೆಯಲ್ಲಿ ನಾವು ನಿಂತುಕೊಂಡು ಮಾತನಾಡಲು ಅಗತ್ಯ, ಗೌರವ, ಘನತೆ ಏನಿದೆ? ಹೇಳಬೇಕು. ಈ ಶಾಸನ ಸಭೆ ನನ್ನ ಸ್ವತ್ತಲ್ಲ ಇಡೀ ರಾಜ್ಯದ ಸ್ವತ್ತು. ತಾವು ಅದರ ರಕ್ಷಕರು. ನನಗೆ ನಿಮ್ಮ ಸಮಕ್ಷಮ ಆತನ ಮೇಲೆ ತನಿಖೆ ಮಾಡುತ್ತೇವೆ ಎಂದು ಅವರು ಮಾತುಕೊಟ್ಟಿದ್ದಾರೆ. ತನಿಖೆ ಮಾಡುವವರೆಗೆ ತಕ್ಷಣದ ಕ್ರಮಗಳೇನಿದೆ ಜರುಗಿಸುತ್ತೇವೆ ಎಂದು ಹೇಳಿದ್ದಾರೆ. ಇದು ಯಾವುದನ್ನೂ ಮಾಡಲಿಲ್ಲ. ಅದರ ಬದಲು ನಮ್ಮ ಬಗ್ಗೆ ಅಪಪ್ರಚಾರವಾಗುತ್ತಿದೆ. Raise ಮಾಡಿಬಿಟ್ಟರು ಏನೂ ಆಗಲಿಲ್ಲ ಸುಮ್ಮನಾಗಿಬಿಟ್ಟರು ಇವರು ಏನು ಮಾಡಲು ಆಯಿತು ಎಂದು. ನಾವು ಅಸಹಾಯಕರಾಗಿ ಈ ಮನೆಯಿಂದ ಆಚೆ ಹೋಗಲು ಆಗುವುದಿಲ್ಲ. ಇದರ ಜೊತೆಗೆ ಸರ್ಕಾರದಿಂದ ವಿಶೇಷ ಸವಲತ್ತನ್ನು ಆತನಿಗೆ ನೀವು ಕೊಡುತ್ತಿದ್ದೀರಿ. Such being the case, ಏತಕ್ಕೆ ನೀವು ಈ ಸಭೆಯ ಮುಂದೆ ಒಂದು ತನಿಖಾ ವರದಿಯನ್ನು ಮಂಡಿಸುತ್ತಿಲ್ಲ. ಏತಕ್ಕೆ ನೀವು ನಮ್ಮ ಗಮನಕ್ಕೆ ತರುತ್ತಿಲ್ಲ. ಬಿಸಿ ಊಟ ಕಾರ್ಯಕ್ರಮದ

ಬಗ್ಗೆ ಕೇಂದ್ರ ಸರ್ಕಾರ ಏನು ಹೇಳುತ್ತದೆ? ಒಂದೇ ಒಂದು ವಿಚಾರವನ್ನು ಓದುತ್ತೇನೆ. "ಮಂಗಳವಾರ 31, ಜುಲೈ 2007, ಕನ್ನಡಪ್ರಭ, ರಾಜ್ಯ ಬಿಸಿ ಊಟದಲ್ಲಿ ಎಸ್.ಸಿ. ಎಸ್.ಟಿ. ಬಾಣಸಿಗರು. ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಪ್ರಶಂಸೆ. ಇದರಿಂದ ಅಸ್ಪೃಶ್ಯತೆ ನಿವಾರಣೆಗೆ ನಾಂದಿ. ಕರ್ನಾಟಕದ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗಿರುವ ಮಧ್ಯಾಹ್ನದ ಬಿಸಿ ಊಟ ಯೋಜನೆಯ ಅಡಿ ಕಾರ್ಯ ನಿರ್ವಹಿಸುತ್ತಿರುವ ಬಾಣಸಿಗರಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವ ಸಂಗತಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಪ್ರಶಂಸೆಗೆ ಪಾತ್ರವಾಗಿದೆ. ಕೆಲವು ಶಾಲೆಗಳಲ್ಲಿ 3 ಅಡುಗೆಯವರಿದ್ದರೆ ಈ ಪೈಕಿ ಒಂದು ಹುದ್ದೆ ಎಸ್.ಸಿ, ಎಸ್.ಟಿ.ಗೆ ಹಿಂದುಳಿದ ವರ್ಗಕ್ಕೆ ಮೀಸಲು, ಇನ್ನು ಹಲವಾರು ಶಾಲೆಗಳಲ್ಲಿ ನಾಲ್ವರು ಬಾಣಸಿಗರಿದ್ದು, ಅದರಲ್ಲಿ ಒಂದು ಸ್ಥಾನ ಎಸ್.ಸಿ. ಎಸ್,ಟಿ.ಗೆ, ಒಂದು ಹಿಂದುಳಿದ ವರ್ಗಕ್ಕೆ, ಇನ್ನೊಂದು ಅಲ್ಪಸಂಖ್ಯಾತರಿಗೆ ಮೀಸಲು. ಸರ್ಕಾರದ ಈ ಕ್ರಮ ಸಾಮಾಜಿಕ ತಾರತಮ್ಯ ಮತ್ತು ಅಸ್ಪೃಶ್ಯತೆ ನಿವಾರಣೆಯಾಗಲು ಹಾದಿ ಮಾಡಿ ಕೊಟ್ಟಿದೆ ಎಂದು ಮಾನವ ಸಂಪನ್ಮೂಲ ಇಲಾಖೆ ಹರ್ಷ ವ್ಯಕ್ತ ಪಡಿಸಿದೆ. ಇದರಿಂದ ಕೇಂದ್ರದ ಮೆಚ್ಚುಗೆ. Kitchen garden ಜಾರಿ. ಅಡುಗೆಯವರಲ್ಲೂ ಎಸ್.ಸಿ., ಎಸ್.ಟಿ. ಯವರ ನೇಮಕ. ಮಾನವ ಸಂಪನ್ಮೂಲ ಇಲಾಖೆ ಮೆಚ್ಚುಗೆ. ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ. ನಿಯಮಿತವಾಗಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ. ಇದನ್ನೆಲ್ಲ ನಮ್ಮ ಮಾನವ ಸಂಪನ್ಮೂಲ ಇಲಾಖೆಗೆ ಹೇಗೆ ಕಳುಹಿಸಿದಿರಿ? ನಾವು ಈ ರಾಜ್ಯದ scheme ನಲ್ಲಿ ಈ ರೀತಿ ಒಬ್ಬರು ಎಸ್.ಸಿ, ಎಸ್.ಟಿ. ಇಟ್ಟಿರುತ್ತೇವೆ, kitchen garden ಅಲ್ಲಿ ಮಾಡುತ್ತೇವೆ, ಅಲ್ಲಿ ಈ ರೀತಿ ಮಕ್ಕಳನ್ನು involve ಮಾಡುತ್ತೇವೆ, ಅವರಿಗೆ medical aidನ್ನು ಒದಗಿಸಿಕೊಡುತ್ತಿದ್ದೇವೆ, ಇವೆಲ್ಲವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಬಿಟ್ಟು ಅವರಿಂದ ಪ್ರಶಂಸೆ ತೆಗೆದುಕೊಂಡು ಇಲ್ಲಿ ಈ ಕಾರ್ಯಕ್ರಮವನ್ನು ಖಾಸಗೀಕರಣ ಮಾಡಿ, ಆ ವಿಷಯಕ್ಕೆ ನಾನು ಮತ್ತೆ ಹೋಗುವುದಿಲ್ಲ. ಆವತ್ತು ವ್ಯಾಪಕವಾಗಿ ಇಲ್ಲಿ ನಾವು ಹೇಳಿದ್ದೇವೆ. ಅವರು ಏನೇನು ಮಾಡಿದ್ದಾರೆ, ಯಾವ್ಯಾವ ಹಂತಕ್ಕೆ ಹೋಗಿದ್ದಾರೆ ಎಂದು. ಇದು ಆದ ಮೇಲೆ ಅವರು ಒಪ್ಪಿಕೊಳ್ಳುತ್ತಾರೆ. ನನ್ನದು 6 ರೂಪಾಯಿ ಇಲ್ಲ, ನಾಲ್ಕೂವರೆ ರೂಪಾಯಿ

ಇದೆಯೆಂದು. ಅವರು costing ನಮಗೆ ಕೊಟ್ಟಿದ್ದಾರೆ. 2 ರೂಪಾಯಿ 61 ಪೈಸೆ ಇವತ್ತು ಬರುತ್ತಿದೆ. ಅದೇ ಖೈದಿಗಳಿಗೆ 11–12–13 ರೂಪಾಯಿ fix ಮಾಡಿ ಒಂದೊಂದು ಊಟಕ್ಕೆ ನೀವು ಅವರಿಗೆ ಅಡುಗೆ ಮಾಡಲು ಅವಕಾಶ ಕೊಡುವುದೇನಿತ್ತು? ಖೈದಿಗಳಿಗೆ ನಾಳೆ ಆಕಸ್ಮಾತ್ ಹೆಚ್ಚು ಕಮ್ಮಿಯಾದರೆ ಯಾರು ಹೊಣೆ? ಈ ಎಲ್ಲವನ್ನು ಪರಿಶೀಲನೆ ಮಾಡಬೇಕಾಗಿದೆ. ಈ ಸಭೆಯ ನಿರ್ಣಯಕ್ಕೆ ವಿರುದ್ಧವಾಗಿ ಮಂತ್ರಿಗಳೇನು ಇವತ್ತು ಅವರಿಗೆ ವಹಿಸಿಕೊಟ್ಟಿದ್ದಾರೆ ಖೈದಿಗಳಿಗೆ ಬಿಸಿ ಊಟ ಅಥವಾ ಮಧ್ಯಾಹ್ನದ ಊಟ ಇದು ನೂರಕ್ಕೆ ನೂರು ಸಭಾ ನಿಂದನೆಯಾಗುತ್ತದೆ. ಈ ಸಭೆಗೆ ತೋರಿಸಿದ ಅಗೌರವವಾಗುತ್ತದೆ. ತಾವು ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶ ಮಾಡಿ ಕೊಡಬೇಕು. ಇಲ್ಲಿ ತನಿಖೆ ಮಾಡುತ್ತೇವೆಂದು ಏನು ಅವರು ಹೇಳಿದ್ದಾರೆ, ಆ ತನಿಖೆ ಪೂರ್ಣವಾಗುವವರೆಗೆ ಯಾವುದೇ ವ್ಯಕ್ತಿ, ಒಂದು ಸರ್ಕಾರದ ತನಿಖೆಗೆ ಒಳಪಡಿಸಬೇಕೆಂದು ಈ ಶಾಸನ ಸಭೆಯಲ್ಲಿ ಪ್ರಸ್ತಾಪವಾದಾಗ, ಅದು ಮುಗಿಯುವವರೆಗೂ ಬೇರೆ ಸರ್ಕಾರಿ ಅನುಕೂಲಗಳನ್ನು ಅಥವಾ ರಿಯಾಯಿತಿಗಳನ್ನು ತೆಗೆದುಕೊಳ್ಳಬಾರದು. ಅದು ಈ ಶಾಸನ ಸಭೆಗೆ ಗೌರವ ತರುತ್ತದೆಂದು ನನಗನಿಸುವುದಿಲ್ಲ. ಸನ್ಮಾನ್ಯ ಪ್ರಕಾಶ್‌ರವರು ಬಹಳ ಅನುಭವಸ್ಥರು. ಅವರು ಬಹುಶಃ ಈ ಸಭೆಯಲ್ಲಿ ಕೊನೆಯವರೆಗೆ ಇದ್ದಿದ್ದರೆ, ಉತ್ತರವನ್ನಾದರೂ ಬೇರೆ ಕೊಡುತ್ತಿದ್ದರು ಅಥವಾ ಉತ್ತರ ಕೊಟ್ಟಿದ್ದಕ್ಕೆ ಜವಾಬ್ದಾರಿಯಾಗಿ ಈ ಸಭೆಗೆ ಮಾಹಿತಿ ಅಥವಾ ವರದಿಯನ್ನಾದರೂ ಕೊಟ್ಟಿರುತ್ತಿದ್ದರು ಅಥವಾ ಅದರ ಬಗ್ಗೆ ಒಂದು ತನಿಖೆಯನ್ನಾದರೂ ಮಾಡಿಸಿ ನಮಗೆ ಹೇಳುತ್ತಿದ್ದರು. ಅವರು ಒಳ್ಳೆಯವರಾಗಿದ್ದಾರೆ. ನಮಗೆ ಯಾರ ಬಗ್ಗೆಯೂ personal ವಿರೋಧ ಇಲ್ಲ. 4–6 ಸಾವಿರದವರೆಗೆ ಈ ರಾಜ್ಯದ ಹೆಣ್ಣು ಮಕ್ಕಳು ಬಂದು, ಧರಣಿ ಕುಳಿತುಕೊಂಡು, privatise ಆಗುತ್ತಿದೆ, ನಮಗೆ ಅಲ್ಪ ಸ್ವಲ್ಪ ಕೂಲಿ ಸಿಗುತ್ತಿತ್ತು, ಎಲ್ಲೋ ಅಡಿಗೆ ಮಾಡಿಕೊಂಡು ಜೀವನ ಮಾಡುತ್ತಿದ್ದೆವು, ನಮ್ಮನ್ನು ತೆಗೆದು ಹಾಕುತ್ತಿದ್ದಾರೆಂದು ಅವರು ಹೇಳಿದ್ದಕ್ಕೆ ಈ ವಿಚಾರವನ್ನು raise ಮಾಡಿದ್ದು ಬಿಟ್ಟರೆ, I am not biased. I am nothing to do with any such charities or institutions. ನಾನು ಯಾರನ್ನಾದರೂ ವಿರೋಧ ಮಾಡಲಿಕ್ಕಾಗಿ ಅದನ್ನು ಅಂದು ಪ್ರಸ್ತಾಪಿಸಲಿಲ್ಲ. ಈ ರಾಜ್ಯದ ಹಿತಾಸಕ್ತಿಯಿಂದ ಮಾತ್ರವೇ ಅದನ್ನು ನಾನು ಅಂದು

ಪ್ರಸ್ತಾಪಿಸಿದ್ದೆ. ನಮಗೆ ಅವಹೇಳನವಾಗುವ ರೀತಿಯಲ್ಲಿ, ಈ ಸಭೆಯ ಗೌರವ ಕಡಿಮೆ ಆಗುವಂತೆ ಮಾಡಿರುವ ತೀರ್ಮಾನದ ವಿರುದ್ಧ ನಾವು ತಂದಿರುವ ಹಕ್ಕುಚ್ಯುತಿಯನ್ನು ತಾವು ಅಂಗೀಕರಿಸಬೇಕೆಂದು ನಾನು ತಮ್ಮನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:– ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಅವರ ಹಕ್ಕಿಗೆ ಚ್ಯುತಿಯಾಗಿರುವ ವಿಚಾರದಲ್ಲಿ...

ಅಧ್ಯಕ್ಷರು:– ತಾವು ಸದರಿ ನೋಟೀಸ್‌ಗೆ signatory ಆಗಿದ್ದೀರಾ?

ಶ್ರೀ ಪಿ.ಜಿ.ಆರ್.ಸಿಂಧ್ಯಾ:– ನಾನು ಸೈನ್ ಮಾಡಿಲ್ಲ. ಆದರೂ ಸಹ ತಮ್ಮ ಅವಕಾಶ ಕೋರಿ, ಒಂದು ನಿಮಿಷ ಮಾತನಾಡಲಿಕ್ಕೆ ಇಚ್ಛಿಸುತ್ತಿದ್ದೇನೆ.

ಅಧ್ಯಕ್ಷರು:– ಎಲ್ಲಾ ವಿಚಾರಗಳನ್ನು ಅವರು ಹೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ನಾನು ಸಿಗ್ನೇಟರಿಯಾಗಿದ್ದೇನೆ. ನನಗೆ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು:– ಆಯಿತು, ಇಬ್ಬರೂ ಎರಡೆರಡು ನಿಮಿಷ ಮಾತನಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ [ಬಾಗೇಪಲ್ಲಿ]:– ಮಾನ್ಯ ಅಧ್ಯಕ್ಷರೆ, ಒಂದೆರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪಿಸ ಬಯಸುತ್ತೇನೆ. ಎಲ್ಲಾ ವಿಚಾರಗಳನ್ನು ಮಾನ್ಯ ಮಾಧುಸ್ವಾಮಿಯವರು ಈಗಾಗಲೇ ಹೇಳಿದ್ದಾರೆ. ನಾನು, ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು, ಮೂವರೂ ಸೇರಿ ಸದರಿ ಹಕ್ಕುಚ್ಯುತಿ ಸೂಚನೆಯನ್ನು ಮಂಡಿಸಿದ್ದೇವೆ. ನಾವು ಮೂವರೇ ಈ ಹಿಂದೆ ಈ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪಿಸಿ ಚರ್ಚೆ ಮಾಡಿದ್ದೆವು. ಒಂದು ವಿಚಾರವನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಕಾರಣದಿಂದ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಖಾಸಗಿಯವರಿಗೆ ಕೊಡಬಾರದು ಎಂಬ ಉದ್ದೇಶದಿಂದ ಸದನದಲ್ಲಿ ಈ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೆವು. ಅದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳಿತ್ತು. ಅಲ್ಲಿ ಸಾವಿರಾರು ಜನ ಹೆಣ್ಣು ಮಕ್ಕಳು ಕೆಲಸ ಮಾಡುತ್ತಿದ್ದಾರೆ. ವಾಸ್ತವವಾಗಿ ಮಾನವ ಸಂಪನ್ಮೂಲ ಸಚಿವಾಲಯ ರಾಜ್ಯ ಸರ್ಕಾರವನ್ನು ಪ್ರಶಂಸೆ ಮಾಡಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿ

ಇರತಕ್ಕಂಥ ಯಾವುದೇ ಕಾರ್ಯಕ್ರಮದಿಂದ ಒಂದು ಸಾಮಾಜಿಕ ನ್ಯಾಯ ಸಿಗುತ್ತಿದೆ ಎಂದು ಹೇಳಿದರೆ, ಅದು ಅಕ್ಷರ ದಾಸೋಹದ ಕಾರ್ಯಕ್ರಮದಿಂದ ಮಾತ್ರ. ಎಲ್ಲಾ ದಲಿತರು, SC/STಗಳು, ಹೆಣ್ಣು ಮಕ್ಕಳೆಲ್ಲಾ ಸೇರಿ ಅಡಿಗೆ ಮಾಡತಕ್ಕಂಥ ಸ್ಥಿತಿಗೆ ಕರ್ನಾಟಕ ರಾಜ್ಯವನ್ನು ನಾವು ತಂದಿದ್ದೇವೆಂದು ಹೇಳಿದರೆ, ಅದು ಹೆಮ್ಮೆ ಪಡಬೇಕಾದಂತಹ ವಿಚಾರವಾಗಿದೆ. ಇಂತಹ ಕಾರ್ಯಕ್ರಮವನ್ನು ಯಾರಿಗೋ ಕೆಲವರು ಏಜೆನ್ಸಿಗಳಿಗೆ ಒಪ್ಪಿಸಿ, ಇಡೀ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ defeat ಮಾಡತಕ್ಕಂಥ ಉದ್ದೇಶ ಇದರ ಹಿಂದೆ ಅಡಗಿದೆ. ಇನ್ನೊಂದು ಕಡೆ ಈ ಸದನದ ಗೌರವದ ಪ್ರಶ್ನೆಯೂ ಸಹ ಅಡಗಿದೆ. ಯಾರೂ ಇದನ್ನು ವೈಯಕ್ತಿಕವಾಗಿ ಭಾವಿಸಬಾರದು, ವೈಯಕ್ತಿಕವಾಗಿ ಇದನ್ನು ತೆಗೆದುಕೊಳ್ಳಬಾರದು. ದಯವಿಟ್ಟು ನಾನು ತಮ್ಮಲ್ಲಿ ವಿನಂತಿಸಿಕೊಳ್ಳತಕ್ಕಂಥದ್ದು ಇಷ್ಟೇ. ಯಾವ ಉದ್ದೇಶದಿಂದ ಈ ವಿಚಾರವನ್ನು ಸದನದಲ್ಲಿ ನಾವು ಪ್ರಸ್ತಾಪ ಮಾಡಿದೆವೋ, ಆ ಉದ್ದೇಶಕ್ಕೆ ಧಕ್ಕೆ ಬರಬಾರದು. ಯಾವ ಉದ್ದೇಶದಿಂದ ಸರ್ಕಾರ ಈ ಕಾರ್ಯಕ್ರಮವನ್ನು ಜಾರಿ ಮಾಡಿದೆ, ಯಾವ ಸಾಮಾಜಿಕ ನ್ಯಾಯದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜಾರಿಗೊಳಿಸಿದೆಯೋ, ಆ ಉದ್ದೇಶ ವಿಫಲವಾಗಬಾರದು. ಅದೆರಡೇ ನಮಗೆ ಇರತಕ್ಕಂಥ ಪ್ರಶ್ನೆ. ಇದನ್ನು ಬಿಟ್ಟರೆ ಬೇರೆ ಯಾವುದೇ ವಿಧವಾದಂತಹ ದುರದ್ದೇಶದಿಂದಾಗಲಿ ಅಥವಾ ಯಾವುದೇ ಪೂರ್ವಗ್ರಹ ಪೀಡಿತರಾಗಿ ನಾವು ಇದನ್ನು ಮಂಡಿಸಿಲ್ಲ. ತಾವು ಇದನ್ನು ದಯವಿಟ್ಟು ಅಂಗೀಕಾರ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ:– ಮಾನ್ಯ ಅಧ್ಯಕ್ಷರೆ, ಅಂದು ಮಾತನಾಡಿದಾಗ, ಅವರು print ಮಾಡಿರುವ ಅನೇಕ ರೀತಿಯ brochures ಅನ್ನು ಸದನಕ್ಕೆ ಕೊಟ್ಟು, ಯಾವ ರೀತಿಯಲ್ಲಿ ನಮ್ಮ ಮಕ್ಕಳನ್ನು ವಿದೇಶದಲ್ಲಿ project ಮಾಡಿದ್ದಾರೆ? ಯಾವ ರೀತಿ ಹಣವನ್ನು ಸುಲಿಗೆ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಸದನಕ್ಕೆ ಮಾಹಿತಿಯನ್ನು ಕೊಡಲಾಗಿತ್ತು. ಸರ್ಕಾರ ಇದರ ಬಗ್ಗೆ ತನಿಖೆಯನ್ನು ಮಾಡಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿತ್ತು. ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಸದನದಲ್ಲಿ ತನಿಖೆಯನ್ನು ಮಾಡಿಸುತ್ತೇವೆಂದು ಹೇಳಿದ ಮೇಲೆ, ತನಿಖೆ ಆಗುವ ಮುಂಚೆ

ಪುನಃ ಜೈಲಿನಲ್ಲಿ ಅವರಿಗೆ ಊಟ ಉಪಚಾರವನ್ನು ಮಾಡುವಂತಹ ವ್ಯವಸ್ಥೆಯನ್ನು ಕೊಟ್ಟಿದ್ದರ ಬಗ್ಗೆ ನಮ್ಮದು ಆಕ್ಷೇಪಣೆ ಇದೆ. ಅದು ಸದನದ contempt ಆಗುತ್ತದೋ, ಇಲ್ಲವೋ ಎಂಬ ಬಗ್ಗೆ ವಿಸ್ತಾರವಾಗಿ ಮಾತನಾಡಲಿಕ್ಕೆ ಅವಕಾಶ ಕೊಡುವುದಾದರೆ, ನಾವು ಹೆಚ್ಚು ಚರ್ಚೆಯನ್ನು ಮಾಡಬಹುದು. ನನ್ನ ಹತ್ತಿರ ಕೆಲವು ಸಿ.ಡಿ.ಗಳಿವೆ. ಆ ವ್ಯಕ್ತಿಗಳು ಏನನ್ನು ಮಾತನಾಡಿದ್ದಾರೆ ಎಂಬುದರ ಬಗ್ಗೆ ನನ್ನ ಹತ್ತಿರ ಸಿ.ಡಿ. ಇದೆ. ಇನ್ನೂ ಕೆಲವು ಸಿ.ಡಿ.ಗಳು ನನಗೆ ಸಿಕ್ಕುತ್ತಿವೆ. ಅದನ್ನು ತಮ್ಮ ಮುಖೇನ ಸರ್ಕಾರಕ್ಕೂ ಕೊಡಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ಏಕೆಂದರೆ, ಯಾವ ಮಟ್ಟದಲ್ಲಿ ಅವರು ಈ ಸದನದ ಬಗ್ಗೆ ಮಾತನಾಡುತ್ತಾರೆ, ಅದರ ಮಾಹಿತಿಯನ್ನು ಕೊಡಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ಸದನದಲ್ಲಿ ಇದರ ಬಗ್ಗೆ ಚರ್ಚೆಯಾದ ನಂತರವೂ ಸಹ, ಅವರು ಪತ್ರಿಕಾಗೋಷ್ಠಿಯನ್ನು ಮಾಡಿ ಹೇಳಿಕೆಯನ್ನು ಕೊಡುತ್ತಾರೆ. ನಂತರ ಬೇರೆ ಬೇರೆ ಕಡೆಗಳಲ್ಲಿ ಸುದ್ದಿ ಮಾಧ್ಯಮ ಮುಖೇನ ಅವರು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಅವರು ಸಹ ಇದನ್ನು record ಮಾಡಿದ್ದಾರೆ. ಆ ಸಿ.ಡಿ.ಗಳು ನನ್ನ ಹತ್ತಿರ ಇವೆ. ಅದಕ್ಕಾಗಿ ತಾವು ಹೆಚ್ಚಿನ ಅವಕಾಶವನ್ನು ಕೊಡಬೇಕು. ಇನ್ನೂ ಹೆಚ್ಚಿನ ಮಾಹಿತಿಯನ್ನು ನಾನು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ಮಾನ್ಯ ಪ್ರಕಾಶ್‌ರವರು ಇದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಇದು contempt ಆಗುತ್ತದೆ, privilege ಆಗುತ್ತದೆಂದು ನಾವು ಹೇಳುತ್ತಿದ್ದೇವೆ. ಅದರ ಬಗ್ಗೆ ಸರ್ಕಾರ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ [ಕನಕಪುರ]:– ಮಾನ್ಯ ಅಧ್ಯಕ್ಷರೆ, ತಾವು ಪುಸ್ತಕದಲ್ಲಿ ಇರತಕ್ಕಂಥ ನಯಮಗಳಿಗೆ ಹೊರತಾಗಿ, ನನಗೆ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ಒಂದು ಮಹತ್ವದ ವಿಚಾರವಾಗಿದೆ. ಮಾನ್ಯ ಗೌರವಾನ್ವಿತ ಸದಸ್ಯರುಗಳು ತಮ್ಮ ಹಕ್ಕಿಗೆ ಧಕ್ಕೆ ಬಂದಿದೆ ಅನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಅದು ಆಗಬಾರದು. ಈ ಸದನಕ್ಕೂ ಸಹಿತ ಯಾವುದೇ ರೀತಿಯಲ್ಲಿ ಅವಹೇಳನ ಆಗಬಾರದು. ಈ ಸದನದ ಯಾವುದೇ ಒಬ್ಬ ಸದಸ್ಯರಿಗೂ ಸಹಿತ ಇಲ್ಲಿ ರಕ್ಷಣೆ ಸಿಗಬೇಕು. ಅವರ ಗೌರವಕ್ಕೆ ಧಕ್ಕೆ ಬರಬಾರದು. ಆದ್ದರಿಂದ ನಾನು

ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು, ಅವರೇನು ನಿರ್ಣಯವನ್ನು ಮಂಡಿಸಿದ್ದಾರೆ, ಅದಕ್ಕೆ ತಾವು ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ಸಾರಿ ಗೌರವಾನ್ವಿತ ಸದಸ್ಯರುಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಈ ಸದನದಲ್ಲಿ ಅವತ್ತು, irregular ಆಗಿ ಇದ್ದುದರಿಂದಾಗಿ, ನಾನು ಬರಲಿಕ್ಕೆ ಆಗಿರಲಿಲ್ಲ. ಆದರೆ ಒಂದು ವಿಚಾರವನ್ನು ನನ್ನ ಅನುಭವದಿಂದ ಹೇಳಬೇಕಾಗುತ್ತದೆ. ಒಬ್ಬ ಶಾಸಕನಾಗಿ ನನ್ನ ಕರ್ತವ್ಯದಲ್ಲಿ ಲೋಪವನ್ನು ಎಸಗಲಿಕ್ಕೆ ನಾನು ತಯಾರಿಲ್ಲ. ನನ್ನ ಕ್ಷೇತ್ರದಲ್ಲಿ ಇರತಕ್ಕಂಥ ಸುಮಾರು ಆರು ಸಾವಿರ ಮಕ್ಕಳಿಗೆ ಈ ಅಕ್ಷರ ಪಾತ್ರೆ ಕಾರ್ಯಕ್ರಮದಿಂದ ಉಪಯೋಗವಾಗುತ್ತಿದೆ. ಸರ್ಕಾರ ಯಾವ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲವೋ, ಆ ಕೆಲಸವನ್ನು ಅಕ್ಷರ ದಾಸೋಹ ಸಂಸ್ಥೆಯಲ್ಲಿ ಇರತಕ್ಕಂಥ ಜನರು ಇವತ್ತು ಮಾಡುತ್ತಿದ್ದಾರೆ. ಅವರು ವಿದೇಶದಲ್ಲಿ ಹಣ ಸಂಗ್ರಹ ಮಾಡುತ್ತಿದ್ದಾರೆ, ನಮ್ಮ ಮಕ್ಕಳನ್ನು ಅವರು ಭಿಕ್ಷುಕರು ಎಂದು project ಮಾಡುತ್ತಿದ್ದಾರೆ ಎನ್ನತಕ್ಕಂಥ ವಿಚಾರಗಳನ್ನೆಲ್ಲಾ ಮಾನ್ಯ ಸದಸ್ಯರು ಮಂಡಿಸಿದ್ದಾರೆ. ಆದರೆ ಆ ಸಂಸ್ಥೆ ಪರವಾಗಿ ಯಾರೂ ಸಹಿತ ಮಾತನಾಡಲಿಕ್ಕೆ ಆಗುತ್ತಿಲ್ಲ. ನಮಗೆ ತಿಳುವಳಿಕೆ ಇರುವ ಹಾಗೆ, ನಮ್ಮ ಇಡೀ ದೇಶದಲ್ಲಿ ಇಸ್ಕಾನ್ ಸಂಸ್ಥೆ ಮಾಡುತ್ತಿರತಕ್ಕಂಥ ಕೆಲಸವನ್ನು ಮುಕ್ತ ಕಂಠದಿಂದ ಹೊಗಳಲಿಕ್ಕೆ ನಾನು ಬಯಸುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಉತ್ತಮವಾದಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ. ವಿಶೇಷವಾಗಿ ಬಡ ಮಕ್ಕಳಿಗೆ ಊಟ ಕಲ್ಪಿಸುವ ವಿಚಾರವಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಲೋಪ ದೋಷಗಳು ಇರಬಹುದು. ಇನ್‌ಫೋಸಿಸ್‌ನ ನಾರಾಯಣಮೂರ್ತಿಯವರು ಮತ್ತು ಶ್ರೀಮತಿ ಸುಧಾ ನಾರಾಯಣಮೂರ್ತಿಯವರು ಇದಕ್ಕೋಸ್ಕರವಾಗಿಯೇ ಕೋಟ್ಯಂತರ ರೂಪಾಯಿಗಳನ್ನು ಕೊಡಿಸುತ್ತಿದ್ದಾರೆ. ಅದರ ಜೊತೆಗೆ ಈ food delivery systemಗೆ ಸಹಿತ ಅನುಕೂಲ ಮಾಡುತ್ತಿದ್ದಾರೆ. ನಮ್ಮ ಹಳ್ಳಿಯ ಅಂಗನವಾಡಿಗಳಲ್ಲಿ ಸಹಿತ ನಾವು ಮಕ್ಕಳಿಗೆ ಆಹಾರವನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಅದರಲ್ಲಿ ನಾವು ಎಷ್ಟರ ಮಟ್ಟಿಗೆ ಸಫಲರಾಗಿದ್ದೇವೆ ಎನ್ನುವುದೂ ಸಹಿತ ತಮಗೆ ಗೊತ್ತಿದೆ. ಇವತ್ತು ವಿಶ್ವ ಆರೋಗ್ಯ ಸಂಸ್ಥೆಯಾಗಲಿ ಅಥವಾ ಬಹಳ progressive ಎಂದು ಹೇಳಿಕೊಳ್ಳತಕ್ಕಂಥ

ಪಕ್ಷಗಳೇನು ಸರ್ಕಾರವನ್ನು ನಡೆಸುತ್ತಿದ್ದಾರೋ, ಅಲ್ಲೂ ಸಹಿತ ಖಾಸಗಿಯವರ ಸಹಕಾರದಿಂದಲೇ ಈ food delivery system ಅನ್ನು ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿರತಕ್ಕದ್ದನ್ನು ರಾಜ್ಯದ ಜನತೆಯ ಗಮನಕ್ಕೆ ತರಬೇಕಾಗುತ್ತದೆ. ಸರ್ಕಾರ ಒಂದು ರೂಪಾಯಿಯೋ, ಎರಡು ರೂಪಾಯಿಯೋ, ಇಷ್ಟನ್ನೋ ಕೊಡಬಹುದು. ಆದರೆ ಅವರು ಸಾರ್ವಜನಿಕರಿಂದ ಹಣವನ್ನು ಸಂಗ್ರಹ ಮಾಡಿ, ಅದರ ಮೂಲಕವಾಗಿ ಮಕ್ಕಳಿಗೆ ಸಹಾಯ ಮಾಡುತ್ತಿದ್ದಾರೆ ಎಂಬುದು ನಮ್ಮ ಗಮನದಲ್ಲಿ ಇರಬೇಕು. ಬೆಂಗಳೂರಿನ ಇಸ್ಕಾನ್ ಸಂಸ್ಥೆ ಮತ್ತು ಇಸ್ಕಾನ್ ಸಂಸ್ಥೆಯನ್ನು ಪ್ರಾರಂಭ ಮಾಡಿದಂತಹ ಬಾಂಬೆಯಲ್ಲಿ ಇರತಕ್ಕಂಥ ಸಂಸ್ಥೆಯ ಆಡಳಿತ ವರ್ಗದ ಮಧ್ಯೆ ಕೆಲವು ಭಿನ್ನಾಭಿಪ್ರಾಯಗಳಿವೆ. ಆ ಭಿನ್ನಾಭಿಪ್ರಾಯಗಳು ಇಲ್ಲಿ ಬಿಂಬಿಸಬಾರದು ಎಂಬುದೇ ನನ್ನ ಅಭಿಪ್ರಾಯ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಾನು High Level Committeeಯ ಉಪಾಧ್ಯಕ್ಷನಾಗಿ ಅವರು Heritage Park ಅನ್ನು ಸ್ಥಾಪಿಸಲು approval ಕೊಟ್ಟಿರತಕ್ಕಂಥದ್ದು ಸಹಿತ ನಿಜ. ಅಲ್ಲಿ ಅವರು real estate ಅನ್ನು ಮಾಡಿ, ಮಳಿಗೆಗಳನ್ನು ಮತ್ತು ಕಟ್ಟಡಗಳನ್ನು ಕಟ್ಟಿ, ಅದರಿಂದ ಬರತಕ್ಕಂಥ ಆದಾಯದಿಂದ ಸಂಸ್ಥೆಯನ್ನು ನಡೆಸಲಿಕ್ಕೆ ಹೊರಟಿರತಕ್ಕಂಥದ್ದು ನಿಜವಾದ ಅಂಶವೇ. ಅದರಲ್ಲಿ ತಪ್ಪೇನು? ಅದರಲ್ಲಿ ನನಗೆ ತಪ್ಪೇನೂ ಕಾಣಿಸುತ್ತಿಲ್ಲ. ಮಾನ್ಯ ಎಸ್.ಎಂ.ಕೃಷ್ಣರವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಒಳ್ಳೆಯ ಕೆಲಸವನ್ನು ಮಾಡಿದರು. ಆ ಬಂಡೆ ಪ್ರದೇಶವನ್ನು ಕೃಷ್ಣನ ದೇವಸ್ಥಾನವನ್ನು ಕಟ್ಟಲಿಕ್ಕೆ ಕೊಟ್ಟರು. ದೆಹಲಿಯಲ್ಲಿ ಇರುವ ಸ್ವಾಮಿ ನಾರಾಯಣ ಟೆಂಪಲ್ ಅನ್ನು ತಾವು ನೋಡಿದ್ದೀರೋ, ಇಲ್ಲವೋ ನನಗೆ ಗೊತ್ತಿಲ್ಲ...

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಮಾನ್ಯ ಸಿಂಧ್ಯಾರವರಿಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ತಾವು ಡೀಟೈಲ್ ಚರ್ಚೆಗೆ ಅವಕಾಶ ಕೊಡಿ. ನಾವು ಇನ್ನೂ ಹೆಚ್ಚು ವಿಷಯವನ್ನು ಹೇಳಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈಗ ಅವರು ವಕೀಲಿ ಹಾಕುವುದಾದರೆ ನಮ್ಮದೇನು ತಕರಾರು ಇಲ್ಲ, ತಾವು ನಮ್ಮ ವಾದವನ್ನು ಕೇಳಬೇಕು.

[ಗೊಂದಲ]

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ವಿಚಾರ ಬಹಳ ಮಹತ್ವದಿದೆ, ಮಾನ್ಯ ಸಿಂಧ್ಯಾರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದು ಒಳ್ಳೆಯದಿದೆ, ಏಕೆಂದರೆ, ಇದರಲ್ಲಿ ಬೇರೆ ಬೇರೆ ಮುಖಗಳಿವೆ, ಈ ವಿಷಯ ಚರ್ಚೆಯಾಗುವ ಅವಶ್ಯಕತೆ ಇದೆ.

ಅಧ್ಯಕ್ಷರು: ಇಲ್ಲಿರುವ ಪ್ರಶ್ನೆ, ಅವರು ಪ್ರಿವಿಲೇಜ್ ಮೂವ್ ಮಾಡಿದ್ದಾರೆ, ನೀವು ಮುಖ್ಯ ವಿಚಾರಕ್ಕೆ ಹೋಗುವ ಅಗತ್ಯವಿಲ್ಲ.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ: ಸಂಪೂರ್ಣವಾಗಿ ಚರ್ಚೆಯಾಗಲಿ ಎಂದು ನಾವೂ ಹೇಳುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ತುಂಬಾ ಅಗತ್ಯವಿದೆ, ದಿವಸವಿಡಿ ಚರ್ಚೆಯಾಗಲಿ, ಈಗ ಚರ್ಚೆಯಾಗಿರುವುದಕ್ಕೆ ರಿಪ್ಲೈ ಕೊಡಿ ಎಂದು ಇಲ್ಲಿ ನಾವು ಕೇಳಿರುವುದು, ಪೂರ್ಣ ಚರ್ಚೆಯಾಗಲಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ತಾಂತ್ರಿಕ ವಿಚಾರವೆಂಬುದು ಸರಿ, ಈ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈ ಬಗ್ಗೆ ಪೂರ್ಣ ಚರ್ಚೆಯಾಗಲಿ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೆ, ಈಗ ನಮ್ಮ ಸಭೆಯ ಮುಂದಿರುವುದು, ಮಾಧುಸ್ವಾಮಿ ಮತ್ತು ಅವರ ಸ್ನೇಹಿತರು ಪ್ರಿವಿಲೇಜ್ ಮೂವ್ ಮಾಡಿದ್ದಾರೆ. ಅಷ್ಟಕ್ಕೆ ಸೀಮಿತವಾಗಿ, ಅವರು ಮೂರು ಜನ ಮಾತನಾಡಿದ್ದಾರೆ, ಏನೋ ಮುಖ್ಯವಾದ ವಿಚಾರವನ್ನು ಹೇಳುತ್ತಾರೆಂದು ಎದ್ದು ನಿಂತು ಕೇಳಿದ್ದಕ್ಕೆ ಹಿರಿಯ ಸದಸ್ಯರಿಗೆ ಅವಕಾಶವನ್ನು ಕೊಟ್ಟೆ, ತಾವು ಅದಕ್ಕೆ ಸೀಮಿತವಾಗಿ ಮಾತನಾಡಿ. ಇದನ್ನು ಮತ್ತ್ಯಾವ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಾದರೆ ಅವಕಾಶ ಕೊಡುತ್ತೇನೆ, ಈಗ ಕೇವಲ ಪ್ರಿವಿಲೇಜ್‌ಗೆ ಸಂಬಂಧಿಸಿದಂತೆ ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಸದಸ್ಯರ ಪ್ರಿವಿಲೇಜ್‌ಗೆ ಸಂಬಂಧಪಟ್ಟ ವಿಚಾರವೇನಿದೆ ಅಥವಾ ಈ ಸದನದ ಪ್ರಿವಿಲೇಜ್‌ಗೆ ಸಂಬಂಧಿಸಿದ ವಿಷಯವೇನಿದೆ, ಅದರ ಬಗ್ಗೆ ನನ್ನದೇನು ತಕರಾರಿಲ್ಲ.

ಚರ್ಚೆಗೆ ಅವಕಾಶ ಕೊಡಬೇಕೆಂದು ಅವರ ಪರವಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಯಾರಾದರು ನೋಟಿಸ್ ಕಳುಹಿಸಿ, ಇನ್ನೊಂದು ಸಾರಿ ಚರ್ಚಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನೋಟಿಸ್ ಕಳುಹಿಸೋಣ, ಖಂಡಿತವಾಗಿ ಮಾಡೋಣ, ಅದರಲ್ಲೇನು ತಕರಾರೇನಲ್ಲ. ನಾನು ತಮ್ಮಲ್ಲೇನು ಕೇಳುತ್ತಿದ್ದೇನೆಂದರೆ, ಇದೊಂದು International Organisation ಅದರಲ್ಲಿ ಬೇಕಾದಷ್ಟು disputes ಇವೆ, ಸಾರ್ವಜನಿಕರಲ್ಲಿ ಚರ್ಚೆಯಾಗಬೇಕಾಗುತ್ತದೆ, ಅವರು ಮಾಡುತ್ತಿರುವ ಒಳ್ಳೆಯ ಕೆಲಸವೂ ಕೂಡ ದೇಶದ ಜನತೆಗೆ ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು: ಸಿಂಧ್ಯಾರವರೆ, ಈಗ ಪ್ರಿವಿಲೇಜ್ ನಮ್ಮ ಮುಂದಿದೆ, ಆ ವಿಚಾರವನ್ನು ಅವರು ಪ್ರಸ್ತಾಪ ಮಾಡಿದರು, ಆಗ ರಾತ್ರಿ 10 ಗಂಟೆಯಾಗಿತ್ತು, ಬಹಳಷ್ಟು ಸದಸ್ಯರು ಮಾತನಾಡಲಾಗಲಿಲ್ಲ, ಚರ್ಚೆಯಾಗಲಿಲ್ಲವೆಂಬುದನ್ನು ಒಪ್ಪುತ್ತೇನೆ. ಬೇರೆ ರೀತಿಯಲ್ಲಿ ಈ ಬಗ್ಗೆ ನನಗೆ ನೋಟಿಸ್ ಕೊಡಿ, ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆದರೆ ಇದರಲ್ಲಿ ಪ್ರಿವಿಲೇಜ್ ಅಷ್ಟೆ ಇದೆ, ಆ ವಿಚಾರವನ್ನು ತೆಗೆದುಕೊಂಡು ಲಂಬಿಸಿಕೊಂಡು ಹೋಗುವುದು ಬೇಡ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಲಂಬಿಸುವುದಿಲ್ಲ, ನಾನು ಈ ವಿಚಾರವನ್ನು ಎತ್ತುವುದಕ್ಕೂ ಹೋಗುತ್ತಿರಲಿಲ್ಲ. ಏಕೆಂದರೆ, ನಾಳೆ ಸದನ ಮುಗಿದು ಹೋಗುತ್ತದೆ.

ಅಧ್ಯಕ್ಷರು: ಒಂದು ನೋಟಿಸ್ ಕೊಡಿ, ನಾಳೆ ಅವಕಾಶ ಕೊಡೋಣ, ಇದು ಮುಗಿಯದ ಕತೆ, ಈಗ ಎಲ್ಲರೂ ಮಾತನಾಡಬೇಕೆಂದು ರೆಕ್ಕೆಪುಕ್ಕವನ್ನೆಲ್ಲಾ ಬಿಚ್ಚಿಕೊಂಡು ನಿಂತು ಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಧ್ಯಕ್ಷರೆ, ನೋಟೀಸ್ ಏತಕ್ಕೆ, ಇದು ನಿಮಗೆ ಸಂಬಂಧಪಟ್ಟದ್ದು, ನಮ್ಮೆಲ್ಲರ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಆಗಬೇಕಾಗಿರುವ ಪ್ರಕ್ರಿಯೆಯನ್ನು ನಾನು ಸ್ವಾಗತ ಮಾಡುತ್ತೇನೆ, ತಾವು ದಯವಿಟ್ಟು ಅದಕ್ಕೆ ಅವಕಾಶ ಕೊಡಿ. ಆದರೆ, ಇಸ್ಕಾನ್ ಸಂಸ್ಥೆಯ ಬಗ್ಗೆ

ಅವಹೇಳನಕಾರಿಯಾಗಿರುವ ವಿಚಾರಗಳನ್ನು ಅವರೇನು ಹೇಳಿದ್ದಾರೆ, ಅದಕ್ಕೆ ವಾಸ್ತವಾಂಶಗಳನ್ನು ರಾಜ್ಯಕ್ಕೆ, ಸದನಕ್ಕೆ ತಿಳಿಸುವುದಕ್ಕೆ ನಮಗೂ ಕೂಡ ಒಂದು ಅವಕಾಶ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು: ಒಂದು ನೋಟಿಸ್ ಕೊಡಿ.

ಶ್ರೀ ಎನ್.ಎಲ್. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ನಾವು ಆ ಕ್ಷೇತ್ರದ ಜನಪ್ರತಿನಿಧಿಯಾಗಿದ್ದೇನೆ. ಮಾತನಾಡುವುದಕ್ಕೆ ನಮಗೂ ಅವಕಾಶ ಕೊಡಿ.

[ಗೊಂದಲ]

ಅಧ್ಯಕ್ಷರು: ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟರೆ ನಾನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆದರೆ ಈಗ ನಮ್ಮ ಮುಂದಿರುವುದು ಪ್ರಿವಿಲೇಜ್.

[ಗೊಂದಲ].

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿ ಸಂಬಂಧಪಟ್ಟ ವಿಷಯದ ಮೇಲೆ ಚರ್ಚೆ ಮಾಡಲು ಅವಕಾಶವಿಲ್ಲ, ಇಲ್ಲಿ ಎತ್ತಿರುವ ಪ್ರಶ್ನೆಗಳೇ ಬೇರೆ. ಅದಕ್ಕೆ ಪ್ರತ್ಯೇಕವಾದ ಚರ್ಚೆಗೂ ಕೂಡ ಅವಕಾಶ ಕೊಡಿ. ಇಲ್ಲಿ ಬಂದಿರುವ ಪ್ರಶ್ನೆ, ಅವರು ಎತ್ತಿರುವ, ನಾವು ತೆಗೆದುಕೊಂಡಿರುವ ನಿರ್ಣಯ, ಸದನಕ್ಕೆ, ವ್ಯಕ್ತಿಗಳಿಗೆ ಅಥವಾ ಸದಸ್ಯರಿಗೆ ಅಗೌರವವಾಗಿ ಹಕ್ಕುಚ್ಯುತಿ ಏನಾದರು ಆಗಿದೆಯೋ ಇಲ್ಲವೋ ಎಂಬುದನ್ನು ಸೀಮಿತವಾದ ವಲಯದಲ್ಲಿ ತಾವು ಪರೀಕ್ಷೆ ಮಾಡಬೇಕಾಗಿದೆ. ಅವರು ಇಲ್ಲಿ ಎತ್ತಿರತಕ್ಕಂಥ ಮುಖ್ಯವಾದ ಪ್ರಶ್ನೆ, ಅದನ್ನು ಹೇಳುತ್ತಾ ಅವರು ಅದರ ಮೆರಿಟ್‌ಗೂ ಹೋದರು, ಆಯಿತೆದೆಂದು ಅದನ್ನು ನಾವು ಬಿಟ್ಟೆವು. ಅದು ಇರಲಿ, ತಾವು ಹೇಳದಿದ್ದರೂ ಕೂಡ ನಿಯಮ 190ರ ಕೆಳಗೆ ಸದಸ್ಯರು ಅಧ್ಯಕ್ಷರ ಅನುಮತಿಯನ್ನು ಪಡೆದು ಸದಸ್ಯರ ಅಥವಾ ಸದನದ ಅಥವಾ ಸದನ ಸಮಿತಿಯ ಹಕ್ಕುಚ್ಯುತಿ ವಿಷಯವನ್ನು ಎತ್ತಬಹುದು. "ಹಕ್ಕುಬಾದ್ಯತೆ ಸಂಬಂಧದಲ್ಲಿ ಸೂಚನಾ ಪತ್ರ–ಹಕ್ಕುಭಾದ್ಯತೆಯ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕಿಂತ ಮುಂಚೆ

ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಪತ್ರವನ್ನು ಕೊಡತಕ್ಕದ್ದು. ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ ಸೂಚನಾ ಪತ್ರದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕದ್ದು. ಹಕ್ಕುಭಾದ್ಯತೆಯನ್ನು ಅನುಮತಿಸಲು ಷರತ್ತುಗಳು–ಹಕ್ಕುಬಾದ್ಯತೆಯ ಪ್ರಶ್ನೆಯನ್ನು ಹಾಕುವ ಹಕ್ಕು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಅದೇ ಉಪವೇಶನದಲ್ಲಿ ಒಂದಕ್ಕಿಂತ ಹೆಚ್ಚು ಪ್ರಶ್ನೆಯನ್ನು ಹಾಕತಕ್ಕದ್ದಲ್ಲ. ಇತ್ತೀಚಿನ ಘಟನೆಯ ನಿರ್ದಿಷ್ಟ ವಿಷಯಕ್ಕೆ ಮಾತ್ರ ಪ್ರಶ್ನೆಯು ಸೀಮಿತವಾಗಿರತಕ್ಕದ್ದು." ಆ ವಿಷಯದಲ್ಲಿ ಸದನದ ಮಧ್ಯಸ್ಥಿಕೆ ಅವಶ್ಯಕವಾಗಿರಬೇಕು. ಮುಂದೆ ತಾವು ಹಕ್ಕುಬಾದ್ಯತೆ ಪ್ರಶ್ನೆಯಾಗಿ ಎತ್ತುವಂಥ ರೀತಿ ತಾವು ಅನುಮತಿ ಕೊಟ್ಟಾಗ ಹೇಗೆ ಇರಬೇಕು, ಅದೆಲ್ಲಾ ವಿವರಗಳನ್ನು ನಿಯಮ 194, 195 ರಲ್ಲಿ ವಿವರಿಸುತ್ತಾರೆ. ಇಲ್ಲಿ ಹಕ್ಕುಬಾದ್ಯತೆಯ ವಿಚಾರದಲ್ಲಿ, ಅವರು ಎತ್ತಿರುವ ಪ್ರಶ್ನೆಯು ಏನು? "13.4.2007ರಂದು ಶಾಸನ ಸಭೆಯ ಅಧಿವೇಶನದಲ್ಲಿ ಇಸ್ಕಾನ್ ಸಂಸ್ಥೆಯು ಬಿಸಿ ಊಟ ಕಾರ್ಯಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ, ಸಭೆಯ ಮುಂದೆ ವರದಿ ಮಾಡಿಸಲು ತೀರ್ಮಾನವಾಗಿದ್ದರೂ ಕೂಡ, ಯಾವುದೇ ತನಿಖೆಯನ್ನು ನಡೆಸದೇ ಸರ್ಕಾರ ಏಕಾಏಕಿ ಈ ಸಂಸ್ಥೆಗೆ ಮಹಿಳಾ ಸಂಖ್ಯೆಯನ್ನು ಜಾಸ್ತಿ ಮಾಡಿದ, ಮಕ್ಕಳ ಸಂಖ್ಯೆ ಜಾಸ್ತಿ ಮಾಡಿದ ಹಾಗೂ ಇದರ ಜೊತೆಗೆ ಜೈಲಿನಲ್ಲಿರುವ ಖೈದಿಗಳಿಗೆ ಅದೇ ಸಂಸ್ಥೆಯಿಂದ ಜೈಲಿನ ಮ್ಯಾನ್ಯುಯಲ್‌ಗೆ ವಿರುದ್ಧವಾಗಿ ಊಟದ ವ್ಯವಸ್ಥೆ ಮಾಡಿದ ಇದರ ಜೊತೆಗೆ ಮಾನ್ಯ ಗೃಹ ಸಚಿವರು, ಬೆಂಗಳೂರು ಇಸ್ಕಾನ್ ಸಂಸ್ಥೆಯವರೆಂದು ಹೇಳಿಕೊಂಡಿರುವ ಮುಖ್ಯಸ್ಥರ ಜೊತೆ ಕುಳಿತು ಟೀಕೆಗಳಿಗೆ ಇತಿಶ್ರೀ ಹಾಡುವ ರೀತಿಯಲ್ಲಿ ಮಾತನಾಡಿರುವುದು ಹಾಗೂ ಆ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆಗಳು ಬಂದಿರುವುದು ಸದನದ ಹಕ್ಕುಚ್ಯುತಿ ಅಥವಾ ಕಂಟೆಂಮ್ಪ್ ಆದ ಹಾಗೆ ಆಗುತ್ತದೆ. ಅಲ್ಲದೇ ಈ ವಿಷಯ ಪ್ರಸ್ತಾಪಿಸಿರುವ ನಮ್ಮ ಹಕ್ಕಿಗೂ ಚ್ಯುತಿ ಬರುತ್ತದೆ. ಆದುದರಿಂದ, ಸದರಿ ಪ್ರಕರಣದ ಬಗ್ಗೆ ನಿಯಮ 191, 192ರ ಕೆಳಗೆ ಹಕ್ಕುಚ್ಯುತಿ ನಿರ್ಣಯ ಸೂಚನೆಯನ್ನು ನೀಡುತ್ತಿದ್ದೇನೆ, ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ. ಈ ಪತ್ರದ ಜೊತೆ ವಿವರಣೆಗಾಗಿ ಸದನದ ಪ್ರೊಸಿಡಿಂಗ್ಸ್ ಪ್ರತಿ, ಪತ್ರಿಕೆಗಳ ವರದಿಯ ಪ್ರತಿ, ಜೈಲ್ ಮ್ಯಾನುವಲ್‌ನಿಂದ ಆರಿಸಿದ ಸಂಬಂಧಪಟ್ಟ ನಿಯಮಗಳ ಪ್ರತಿಯನ್ನು

ಲಗತ್ತಿಸಿರುತ್ತೇನೆ, ವಂದನೆಗಳೊಂದಿಗೆ." ಇದು ಅವರು ಕಳುಹಿಸಿರುವ ಹಕ್ಕುಚ್ಯುತಿಯ ಪ್ರಸ್ತಾವ. ಇಲ್ಲಿ ಗಮನಸಬೇಕಾಗಿರುವ ವಿಷಯ, ಈ ಹಕ್ಕುಚ್ಯುತಿ ಬರುವುದರಲ್ಲಿ ಎರಡು ವಿಧ. ಹಾಗೂ ಮತ್ತೊಬ್ಬ ಸದಸ್ಯರಾದ ಮಾನ್ಯ ಶ್ರೀರಾಮರೆಡ್ಡಿಯವರು ಎತ್ತಿರುವುದು, ಬಿಸಿ ಊಟದ ಕಾರ್ಯಕರ್ತರೆಲ್ಲಾ ಬಂದಿದ್ದರು, ಬಾಣಸಿಗರೆಲ್ಲಾ ಇದ್ದರು, ನಿರ್ಣಯದ ಮೂಲಕವಾಗಿ ಈ ಬಾಣಸಿಗರನ್ನೆಲ್ಲಾ ನಿರುದ್ಯೋಗಿಗಳನ್ನಾಗಿ ಮಾಡುತ್ತಿದ್ದೀರಿ, ಅವರ ಮೇಲೆ ಆಪಾದನೆಗಳು ಬಂದಿವೆ, ಈ ಆಪಾದನೆಗಳ ಸಂದರ್ಭದಲ್ಲಿ ನೀವು ಬೇರೆ ಜೈಲಿನಲ್ಲಿ ಊಟದ ವ್ಯವಸ್ಥೆ ಮಾಡಿಕೊಟ್ಟಿರುವುದು ಜೈಲಿನ ಮ್ಯಾನ್ಯುಯಲ್‌ಗೆ ವಿರುದ್ಧವಾಗಿದೆನ್ನುವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಗಮನಸಬೇಕಾಗಿರುವುದು, ಇದು ಬಿಸಿ ಊಟದ ಕಾರ್ಯಕ್ರಮವಲ್ಲ. ಇದೊಂದು ಖೈದಿಗಳಿಗೆ ಕೊಡುವಂಥ ಸಿಹಿ ಊಟದ ಕಾರ್ಯಕ್ರಮ. ಬಿಸಿ ಊಟದ ಕಾರ್ಯಕ್ರಮದಲ್ಲಿ ಸರ್ಕಾರ ಬಾಣಸಿಗರನ್ನು ನೇಮಕಾತಿ ಮಾಡಿಕೊಳ್ಳುತ್ತದೆ. ಜೈಲಿನಲ್ಲಿ ಆಹಾರವನ್ನು ತಯಾರು ಮಾಡುವುದಕ್ಕೆ ಅಲ್ಲಿ ಪರಿಣಿತರಿರುವ ಖೈದಿಗಳನ್ನೇ ನಾವು ಉಪಯೋಗಿಸಿಕೊಳ್ಳುತ್ತೇವೆ. ಆ ಮ್ಯಾನ್ಯುಯಲ್ ವಿಚಾರವನ್ನು ನಾನು ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತೇನೆ. ಆದರೆ ಹಕ್ಕುಚ್ಯುತಿಯಾಗಬೇಕಾಗಿದ್ದರೆ ಇಲ್ಲಿ ಯಾವ ಬಾಣಸಿಗರು ಕೂಡ ನಿರುದ್ಯೋಗಿಗಳಾಗಿರುವುದಿಲ್ಲ. ಬಿಸಿ ಊಟದ ಕಾರ್ಯಕ್ರಮಕ್ಕೂ ನಾವು ತೆಗೆದುಕೊಂಡಿರುವ ನಿರ್ಣಯಕ್ಕೂ ಏನು ಸಂಬಂಧವಿಲ್ಲ. ಮತ್ತೆ ಅವರು ಇನ್ನು ಪ್ರಸ್ತಾಪಿಸಿ, ಆ ಇಸ್ಕಾನ್ ಸಮಿತಿಯ ಜನಗಳ ಜೊತೆಗೆ ತಾವು ಕುಳಿತು ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದೀರಿ, ನಮ್ಮ ಹಕ್ಕುಚ್ಯುತಿಯನ್ನು ಮಾಡಿದ್ದಿರೆಂದು ಹೇಳಿದ್ದಾರೆ. ಆದರೆ ಅವರನ್ನು ಎದುರಿಗೆ ಕೂರಿಸಿಕೊಂಡು ನಾನು ಅಂಥ ಯಾವುದೇ ಪತ್ರಿಕಾ ಹೇಳಿಕೆಯನ್ನು ಮಾಡಿಲ್ಲ. ನಾನು ಬಳ್ಳಾರಿಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರದ ರೂಪದಲ್ಲಿ ಇಂಥ ಒಂದು ಕಾರ್ಯಕ್ರಮವನ್ನು, ಇಂಥ ಒಂದು ಪ್ರಯೋಗಾತ್ಮಕವಾಗಿರುವ ಉತ್ತಮವಾದ ಆಹಾರವನ್ನು ಖೈದಿಗಳಿಗೆ ಕೊಡುವ ಕಾರಣಕ್ಕಾಗಿ ಇದನ್ನು ನಾವು ಮಾಡಿದ್ದೇವೆ. ಯಾವುದೇ ನಿಯಮಾವಳಿಯನ್ನು ಉಲ್ಲಂಘನೆ ಮಾಡಿಲ್ಲ. ಈ ಪ್ರಯೋಗ ಯಶಸ್ವಿಯಾದರೆ ಅದನ್ನು ಹಿಂಡಲಗ ಮತ್ತು ಬಳ್ಳಾರಿ ಜೈಲಿಗೂ ವಿಸ್ತರಿಸಬೇಕೆನ್ನುವ ಅಭಿಪ್ರಾಯ ಸರ್ಕಾರದಲ್ಲಿದೆ ಎನ್ನುವ ಮಾತನ್ನು

ಹೇಳಿದ್ದೇನೆ. ಹಕ್ಕುಚ್ಯುತಿ ಆಗಬೇಕಾಗಿದ್ದರೆ, ಏನಾಗಬೇಕಾಗಿತ್ತು, ತಾವು ಆಪಾದನೆಗಳನ್ನು ಮಾಡಿದ್ದೀರಿ, ಆಪಾದನೆಯ ಸತ್ಯಾಸತ್ಯೆಗಳ ಕುರಿತಾಗಿ ನಾವು ತನಿಖೆಯನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇವೆ. ಇಲ್ಲಿಯವರೆಗೆ ತನಿಖೆ ಮಾಡಿಲ್ಲ ಎನ್ನುವಂಥಾದ್ದು ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತನಿಖೆಗೆ ಆದೇಶ ಮಾಡುವುದಕ್ಕೆ ನಾವು ಇವತ್ತಿಗೂ ಕೂಡ ಬದ್ದರಾಗಿದ್ದೇವೆ. ಪ್ರಶ್ನೆಗಳಿಗೆ ಆ ಸಂಸ್ಥೆಯವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಿಂಧ್ಯರವರು ಹೇಳಿದಂತೆ ಅನೇಕ ವಿಚಾರಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಅದರ ಗುಣಾವಗುಣಗಳ ಬಗ್ಗೆ ನಾನು ಈಗ ಪ್ರವೇಶ ಮಾಡುವುದಕ್ಕೆ ತಯಾರಿಲ್ಲ. ಆದರೆ ಇಷ್ಟಕ್ಕೆ ಮಾತ್ರ ಸೀಮಿತವಾಗಿರತಕ್ಕಂಥಾದ್ದು. ತನಿಖೆ ನಡೆಸುವುದರಲ್ಲಿ ವಿಳಂಬವಾಗಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ತನಖೆಗಾಗಿ ಆದೇಶ ಮಾಡಬೇಕಾಗಿತ್ತು, ನಾವು ತನಿಖೆ ಮಾಡಿಲ್ಲ. ಈಗ ಮತ್ತೊಂದು ಸಲ ಈ ಸದನದಲ್ಲಿ ಹೇಳುತ್ತೇನೆ, ಅವರು ಎತ್ತಿರತಕ್ಕಂತಹ ಆಪಾದನೆಗಳ ಬಗ್ಗೆ ನಾನು ಸೂಕ್ತವಾದ ತನಿಖೆ ಮಾಡಿಸಲಿಕ್ಕೆ ಸರ್ಕಾರ ಈಗಲೂ ಕೂಡ ಬದ್ಧ ಇದೆ. ತನಿಖೆಯನ್ನು ಮಾಡುವುದಿಲ್ಲವೆಂದು ನಾವು ಎಲ್ಲಿಯೂ ಕೂಡ ಹೇಳಿಲ್ಲ. ಸದನದಲ್ಲಿ ತನಿಖೆ ಮಾಡುತ್ತೇವೆಂದು ಹೇಳಿ ಮಾಡದೇ ಇರುವುದರಿಂದ ವಿಳಂಬವಾಗಿದೆ ವಿನಃ ಅದನ್ನು ನಾವು ನಿರಾಕರಿಸಿದ್ದೇವೆ ಎನ್ನುವ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ಹಕ್ಕುಚ್ಯುತಿ ಉಂಟಾಗುವುದಿಲ್ಲ. ಇದಕ್ಕಿಂತಲೂ ಮುಖ್ಯವಾಗಿರತಕ್ಕಂಥಾದ್ದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರುವುದು ಮತ್ತೊಂದು ಅವರು ಆ ಸಂಸ್ಥೆಯ ಗುಣಾವಗುಣಗಳ ಮೇಲೆ ಇರತಕ್ಕಂತಹ ಪ್ರಶ್ನೆ. ಅವರು ಪ್ರಸ್ತಾಪ ಮಾಡಿದ ದಿವಸದಂದು ನಾನು ಸದನದಲ್ಲಿರಲಿಲ್ಲ. ಮಾನ್ಯ ಚೆಲುವರಾಯಸ್ವಾಮಿಯವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಮಿಶ್ರವಾದ ಪ್ರಶ್ನೆಗಳು ಪ್ರಸ್ತಾಪಿಸಲ್ಪಟ್ಟಿದ್ದವು. KIADB ತನಿಖೆ ವಿಚಾರದಲ್ಲಿ ಕೂಡ ಪ್ರಸ್ತಾಪ ಮಾಡಿದ್ದರು. ಈ ತನಿಖೆಗಳಿಗೆ ನಾವೂ ಕೂಡ ಬದ್ಧರಾಗಿದ್ದೇವೆ ಎನ್ನುವಂತಹ ವಿಷಯವನ್ನು ಕೂಡ ಮಾನ್ಯ ಚೆಲುವರಾಯಸ್ವಾಮಿಯವರು ಹೇಳಿದ್ದಾರೆ. ಮಾನ್ಯ ಚೆಲುವರಾಯಸ್ವಾಮಿಯವರು ಈ ಸದನದಲ್ಲಿ ಏನು ಮಾತು ಕೊಟ್ಟಿದ್ದಾರೆ, ಅದಕ್ಕೆ ಈ ಸರ್ಕಾರ ಬದ್ಧವಾಗಿದೆ. ನಾನೂ ಕೂಡ ಬದ್ಧನಾಗಿದ್ದೇನೆ. ಆದರೆ ಇಲ್ಲಿ ಬರತಕ್ಕಂತಹ ಪ್ರಶ್ನೆ, ವಿಳಂಬವಾಗಿದೆ ಎನ್ನುವಂತಹ ಒಂದೇ ಕಾರಣಕ್ಕಾಗಿ ಹಕ್ಕುಚ್ಯುತಿ

ಉಂಟಾಗುವುದಿಲ್ಲ. ಇದಕ್ಕಿಂತಲೂ ಪೂರ್ವದಲ್ಲಿ ಅನುಭವ ಇರತಕ್ಕಂತಹ ಮಾನ್ಯ ಮಾಧುಸ್ವಾಮಿಯವರಿಗೆ ಗೊತ್ತಿರಬಹುದು, ಇದೇ ಪೀಠದ ವಿಚಾರದಲ್ಲಿ ಯಾವುದು ಹಕ್ಕುಚ್ಯುತಿ ಆಗುತ್ತದೆ ಎನ್ನುವುದಕ್ಕೆ ಅನೇಕ ತೀರ್ಮಾನಗಳನ್ನು ತಾವು ಕೊಟ್ಟಿದ್ದೀರಿ. ಆ ತೀರ್ಪುಗಳ ವಿಚಾರದಲ್ಲಿ "Incorrect statement by the minister: Making statement or furnishing wrong information to the House does not amount to breach of privilege." ಇಲ್ಲಿ wrong information ಅವರು ಹೇಳತಕ್ಕಂಥಾದ್ದು ಏನಿದೆ, ಆಪಾದನೆಗಳನ್ನು ಮಾಡಿದ್ದೇವೆ. ಆಪಾದನೆಗಳನ್ನು ಮಾಡಿದ ಮೇಲೆ ಸರ್ಕಾರ ಅವರಿಗೆ ಮತ್ತೆ ಒಂದು ಅವಕಾಶವನ್ನು ಕೊಟ್ಟು, ಜೈಲಿನಲ್ಲಿರತಕ್ಕಂತಹ ಖೈದಿಗಳಿಗೆ ಏಕೆ ಅವಕಾಶವನ್ನು ಕೊಟ್ಟಿರಿ, ಆಪಾದನೆಗಳು ಸಾಬೀತಾದಂಥದ್ದೇನು ಅಲ್ಲ. ಆರೋಪಗಳು ಇದ್ದೇ ಇರುತ್ತವೆ. ಆರೋಪಗಳು ಸಾಬೀತಾದಾಗ ಮಾತ್ರ ಅದು ಒಂದು ಕಪ್ಪು ಗುರುತಿನ ಸಂಸ್ಥೆ ಆಗುತ್ತದೆ. ಅಂತಹ ವಿಚಾರದಲ್ಲಿ ಸರ್ಕಾರ ಯಾವ ನಿರ್ಣಯವನ್ನು ಕೈಗೊಳ್ಳಬೇಕೆಂದು ಹೇಳಿ, ಮಾಡುತ್ತೇವೆ. ನಾವು ಅವರ ಜೊತೆ ಏನು MOU ಮಾಡಿಕೊಂಡಿದ್ದೇವೆ ಎನ್ನತಕ್ಕಂಥಾದ್ದು ಇದೆ. ಆದರೆ ಅದರ ವಿವರಗಳನ್ನು ಇಲ್ಲಿ ಕೊಡುವುದಕ್ಕೆ ಹೋದರೆ, ಸಮಯ ಸಾಕಾಗುವುದಿಲ್ಲ. ತಾವು ಹಕ್ಕುಚ್ಯುತಿಯನ್ನು ತಿರಸ್ಕರಿಸಬೇಕೆಂದು ನನ್ನ ಮನವಿ. ಇದೇ ಪೀಠದ ಮೂಲಕ ಎಷ್ಟು ದೂರ ಹೋಗಿ ನಮ್ಮಲ್ಲಿ ನಿರ್ಣಯಗಳು ಆಗಿವೆ ಎಂದರೆ, On 24th July 1967 the Hon.Member Sri K.H.Patil in his letter written to the Hon.Speaker in the second week of July 1967 had pointed out that the Hon.Minister Sri S.R.Kanti had told the House on 16-3-1967 that the Government of India had given instructions to close down the rural institute at Hanumanahatti, but the Department of Education, Mysore had represented that it should not be closed" ಈ ಎಲ್ಲಾ ವಿವರಗಳನ್ನು ಹೇಳುತ್ತಾ, ಅದು in correct ಎಂದು ಹೇಳುವುದಕ್ಕೆ ಅದು ಆಗಿರಲಿಲ್ಲ. ಅದಕ್ಕೆ ಅವರು ಹೇಳುತ್ತಾರೆ. If there is inaccurate statement or wrong information furnished by the Hon. minister to the House, there is a definite procedure to be adopted to rectify such matters, but it

does not amount to breach of privilege. ಇದರ ಜೊತೆಗೆ rectification ಎಂದರೆ ಏನು? ವಿಳಂಬವಾಗಿರುವುದಕ್ಕೆ ತನಿಖೆ ನಡೆಸಬೇಕು, yes ತನಿಖೆ ನಡೆಸುತ್ತೇವೆ. ಆ ತನಿಖೆಯಲ್ಲಿ ಸಾಬೀತಾದರೆ, ಅವರ ಜೊತೆ ಮಾಡಿಕೊಂಡ ಒಪ್ಪಂದಗಳನ್ನು ನಾವು ಪುನರ್ ವಿಮರ್ಶೆ ಮಾಡುತ್ತೇವೆ. ಇದರ ಜೊತೆಗೆ ಬೇರೆ ಬೇರೆ ಸಂದರ್ಭಗಳಲ್ಲಿ ಕೂಡ "to constitute a breach of privilege, the statement must be a deliberate lie with an intention to misleading the House. In this case it is difficult to conceive any such intention on the part of the Hon.Chief Minister. I, therefore hold that the notice is not in order." ಇಲ್ಲಿ ನಮ್ಮ ಮೇಲೆ ಇರತಕ್ಕಂತಹ ಮುಖ್ಯ ಆಪಾದನೆ ಏನು? ಅವರ ಮೇಲೆ ತನಿಖೆ ನಡೆಸುತ್ತೇವೆ, ಆಪಾದನೆ ಮಾಡಲಿಕ್ಕಾಗಿ ಎನ್ನುವ ಕಾರಣಕ್ಕಾಗಿ ಕೂಡ ನೀವು ಖೈದಿಗಳಿಗೆ ಸಿಹಿ ಊಟ ಕೊಡತಕ್ಕಂತಹ ಏರ್ಪಾಡು ಮಾಡಿದ್ದೀರಿ. ಇಲ್ಲಿ ಯಾವುದರಲ್ಲಿಯೂ ಸದನವನ್ನು ದಾರಿ ತಪ್ಪಿಸುವಂತಹ ವಿಚಾರವನ್ನು ಹೇಳಿಲ್ಲ. ತನಿಖೆ ಮಾಡುತ್ತೇವೆಂದು ಹೇಳಿದ್ದೇವೆ. ತನಿಖೆ ಮಾಡುವುದಿಲ್ಲವೆಂದು ನಾವು ಇಲ್ಲಿಯವರೆಗೂ ನಿರಾಕರಿಸಿಲ್ಲ. ವಿಳಂಬವಾಗಿರುವುದನ್ನು ನಾವು ಒಪ್ಪುತ್ತೇವೆ. ಆ ವಿಳಂಬಕ್ಕೆ ನಾವು ಕ್ಷಮೆ ಕೇಳುತ್ತೇವೆ. ನಾವು ಸದನದಲ್ಲಿ ಹೇಳಿದಂತೆ ಇನ್ನು ಸ್ವಲ್ಪ ದಿವಸಗಳಲ್ಲಿ ತನಿಖೆ ನಡೆಸುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ಇಲ್ಲಿ ಹಕ್ಕುಚ್ಯುತಿ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ? ಸದನವನ್ನು ನಾವು ಯಾವ ತಪ್ಪು ದಾರಿಗೆ ಎಳೆದಿದ್ದೇವೆ? ಆಪಾದನೆಗಳು ಬಂದಿವೆ ಎಂದ ತಕ್ಷಣ ಅವರ ಜೊತೆ ನೀವು ಯಾವುದೇ ವ್ಯವಹಾರಗಳನ್ನು ಮಾಡಬಾರದು, ಯಾವುದೇ ಒಪ್ಪಂದಕ್ಕೆ ಒಳಪಡಿಸಬಾರದು ಎನ್ನತಕ್ಕಂಥಾದ್ದು ಸರಿಯಾದುದಲ್ಲ. ಅದರ ಜೊತೆಗೆ, ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಬಾಣಸಿಗರನ್ನೆಲ್ಲಾ ನಿರುದ್ಯೋಗಿಗಳನ್ನಾಗಿ ಮಾಡಿದ್ದೀರಿ ಎಂದು ಹೇಳಿದರು. ಅದು ಅವರ ಪಕ್ಷದಿಂದ ನಡೆದಿರತಕ್ಕಂತಹ ಹೋರಾಟ ಕೂಡ ಇದೆ. ಬಾಣಸಿಗರನ್ನು ತೆಗೆದು ಹಾಕತಕ್ಕಂಥದ್ದರಲ್ಲಿ ಅವರದೇ ಆದ ನಿಲುವುಗಳಿವೆ. ಆದರೆ ಇಲ್ಲಿ ಆ ಬಾಣಸಿಗರ ಪ್ರಶ್ನೆ ಉದ್ಭವವಾಗುವುದಿಲ್ಲ. ಬಿಸಿ ಊಟದ ಕಾರ್ಯಕ್ರಮದಲ್ಲಿ ಬೇರೆಯವರನ್ನು ತೆಗೆದುಕೊಂಡಿರತಕ್ಕಂಥಾದ್ದು ಇಲ್ಲ. ವಿದ್ಯಾರ್ಥಿಗಳನ್ನು ಇದರಲ್ಲಿ ಒಳಪಡಿಸಿದ್ದೇವೆಂದು ಇಲಾಖೆಯವರು ಹೇಳಿಲ್ಲ. ಶಿಕ್ಷಣ

ಇಲಾಖೆಯವರು ಈ ಪ್ರಶ್ನೆಯನ್ನು ಇಲ್ಲಿ ಎತ್ತಿಕೊಂಡಿಲ್ಲ. ಆದ್ದರಿಂದ you have to dismiss or reject this particular application in limine. ಇನ್ನು ಅನೇಕ ವಿಚಾರಗಳು "Misleading the House:- there cannot be a breach of privilege unless there is deliberate intention of misleading the House. Since no such circumstances exist I have disallowed the motion." ಇಂತಹ ಅನೇಕ ಉದಾಹರಣೆಗಳು ನಮ್ಮ ಈ ಸದನದಲ್ಲಿ ಆಗಿರತಕ್ಕಂಥದ್ದು ಇದೆ. ಪ್ರಾಯಶಃ ಅವರು ಚರ್ಚೆ ಮಾಡಬೇಕು ಎನ್ನುವಂಥದ್ದು ಏನಾದರೂ ಇದ್ದರೆ, ಅಥವಾ ಇಸ್ಕಾನ್ ಸಂಸ್ಥೆಯ ವಿಚಾರದಲ್ಲಿ ಅವರದೇ ಆದ ವಿಚಾರಗಳಿದ್ದರೆ, ಬೇರೆ ರೂಪದಲ್ಲಿ ತರಬಹುದು. ಇಂತಹ ಅನುಭವಿಗಳಾದ ಮಾನ್ಯ ಮಾಧುಸ್ವಾಮಿಯವರು ವೈಯುಕ್ತಿಕವಾಗಿ ಅವರ ಮೇಲೆ ಏನೂ ಇಲ್ಲ, ನಮ್ಮ ಸದನದ ಹಕ್ಕುಚ್ಯುತಿ ಆಗಿರುವುದನ್ನು ಸಾಬೀತು ಪಡಿಸಬೇಕೆಂದು ಹೇಳಿದರು. ಹಕ್ಕುಚ್ಯುತಿ ಆಗಿದೆ ಎಂದು ಸಾಬೀತಾಗಿ ತಮ್ಮ ಮನವರಿಕೆ ಆದ ನಂತರ ಮತ್ತೆ ಬೇರೆ procedure ಇದೆ. ಇದರ ಕೆಳಗೆ ಷರತ್ತುಗಳನ್ನು ಹಾಕಬೇಕು. ಅದರ ಕೆಳಗೆ ಅವರನ್ನು ಕರೆದು ಎದ್ದು ನಿಲ್ಲಬೇಕೆಂದು ಹೇಳಬೇಕು. ಅದಾದ ನಂತರ 10 ಜನ ಇದರ ಪ್ರತಿಪಾದನೆಗೆ ನಿಂತುಕೊಳ್ಳಬೇಕು. ಅದಾದ ನಂತರ ಹಕ್ಕುಚ್ಯುತಿಯನ್ನು ತಾವು ತಮ್ಮ ವಿವೇಚನೆ ಕೆಳಗೆ ಹಕ್ಕುಬಾಧ್ಯತಾ ಸಮಿತಿಗಾದರೂ ಕಳುಹಿಸಬಹುದು, ಅಥವಾ ಇಡೀ ಸದನವೇ ಹಕ್ಕುಭಾದ್ಯತೆಯ ಪರಿಸ್ಥಿತಿಯನ್ನು ಅರಿತುಕೊಳ್ಳಬಹುದು. ಇವು ಯಾವುವೂ ಆಗದೇ ಇರತಕ್ಕಂತಹ ಕಾರಣಕ್ಕಾಗಿ ಸುಮ್ಮನೆ ಅವರ ಮತ್ತು ಇಸ್ಕಾನ್ ಸಂಸ್ಥೆಯ ನಡುವೆ ಏನೂ ಭಿನ್ನಾಭಿಪ್ರಾಯ ಇಲ್ಲವೆಂದು ಭಾವಿಸುತ್ತೇನೆ. ನಮಗೆ ಯಾವ ರೀತಿಯಾಗಿ ದುರುದ್ದೇಶವಿಲ್ಲವೋ ಹಾಗೆಯೇ ಮಾನ್ಯ ಮಾಧುಸ್ವಾಮಿಯವಿರಿಗೂ ಇಸ್ಕಾನ್ ಸಂಸ್ಥೆಯ ವಿರುದ್ಧ ದುರುದ್ದೇಶ ಇಲ್ಲವೆಂದು ನಾನು ನಂಬಿದ್ದೇನೆ. ಏಕೆಂದರೆ ಅವರು ಇಂತಹ ವಿಷಯಗಳನ್ನು ಸಾರ್ವಜನಕವಾಗಿ ಎತ್ತುತ್ತಾರೆ. ಆದ್ದರಿಂದ ಈ ವಿಚಾರದ ಬಗ್ಗೆ ಅವರಿಗೆ ದುರುದ್ದೇಶವಿಲ್ಲವೆಂದು ನಾನು ನಂಬಿದ್ದೇನೆ. ಆ ಕಾರಣಕ್ಕಾಗಿ ಇದು ಹಕ್ಕುಚ್ಯುತಿ ಆಗಿಲ್ಲ, ಪ್ರಥಮ ಹಂತದಲ್ಲಿಯೇ ತಾವು ಇದನ್ನು ತಿರಸ್ಕರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: "Examples of speeches and writings which have been held to constitute contempt of the House may be categorized as reflection on the House." ಸಭೆಯ ತೀರ್ಮಾನದ ಮೇಲೆ reflect ಮಾಡುವಂತಹ ಯಾವುದೇ ಕಾರ್ಯಕ್ರಮಗಳಿದ್ದರೆ that amounts to privilege ಎಂದು ಹೇಳಿ, ಕೌಲ್ ಅಂಡ್ ಶಕ್ದರ್‌ನಲ್ಲಿ ಸ್ಪಷ್ಟವಾಗಿ ಹೇಳಿದೆ. ಈ ಸಭೆಯ ಅವತ್ತಿನ ಚರ್ಚೆಯ ತೀರ್ಮಾನದ ಮೇಲೆ ಮಂತ್ರಿಗಳು ಇಲ್ಲಿ enquire ಮಾಡುತ್ತೇವೆಂದು ಹೇಳಿದ ಮೇಲೆ, ಅದು ಇತ್ಯರ್ಥವಾಯಿತು ಎಂದು ನಾನು ಭಾವಿಸುತ್ತೇನೆ. I am a small man when compared to Hon.Law Minister. Government reply ಕೊಟ್ಟ ಮೇಲೆ ಅದು ಡಿಸೈಡ್ ಆಯಿತು ಎಂದು ನಾನು ತಿಳಿದುಕೊಂಡು ಮನೆಗೆ ಹೋಗಿದ್ದೇನೆ. ತೀರ್ಮಾನ ಅಲ್ಲ ಅದು ನಾನು enquire ಮಾಡುತ್ತೇನೆಂದು ಸರ್ಕಾರ ಉತ್ತರ ಕೊಡುವುದಾದರೆ ಅದು ಅವರಿಗೆ ಬಿಡುತ್ತೇನೆ. ಎರಡನೆಯದು ನಾನು ತಮಗೆ photographs ಕಳುಹಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಅದರ ಮೆರಿಟ್ಸ್‌ಗೆ ಹೋಗಬೇಡಿ. ಸಿಂಧ್ಯಾರವರು ಮಾತನಾಡುವಾಗ..

ಶ್ರೀ ಜೆ.ಸಿ.ಮಾಧುಸ್ವಾಮಿ: ಸ್ವಲ್ಪ ತಡೆಯಿರಿ. ನಿಮ್ಮ ಮಾತುಗಳನ್ನು ನಾವು ಕುಳಿತು ಕೇಳಿದ್ದೇವೆ. ಮಾನ್ಯ ಸಿಂಧ್ಯಾರವರು ದೊಡ್ಡವರು. ನಾವು ಅವರಿಗೆ ಗೌರವಿಸುತ್ತೇವೆ. Privilege between us and you.

ಶ್ರೀ ಎಂ.ಪಿ.ಪ್ರಕಾಶ್: ನಾನು ಬಹಳ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಾವು ತೀರ್ಮಾನ ಮಾಡಿ ತನಿಖೆ ನಡೆಸುತ್ತೇವೆ ಎಂದ ತಕ್ಷಣವೇ It is not a reflection on the House at all.

ಅಧ್ಯಕ್ಷರು: ಅವರು ಹೇಳಿದ್ದಾರೆ, ಪ್ರಿವಿಲೇಜ್‌ಗೆ ಸೀಮಿತವಾಗಿ ನೀವು ಏನು ಹೇಳುತ್ತೀರಿ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ಅವರು ಅವರ ಜೊತೆ ಕುಳಿತು ಊಟ ಮಾಡುತ್ತಿರುವ ಪೇಪರ್ ಕಟಿಂಗ್ಸ್ ಕಳುಹಿಸುತ್ತಿದ್ದೇನೆ. ಅವರು ಹೇಳಿರುವ ಹೇಳಿಕೆಗಳ ಕಟಿಂಗ್ಸ್ ಕಳುಹಿಸುತ್ತಿದ್ದೇನೆ. ಇದು ನಮ್ಮ ವಾದಕ್ಕೆ

ಇತ್ಯರ್ಥವಾಗುವುದಿಲ್ಲ. ಇದು ಕೊನೆಗೆ ತಾವೇ ನಿರ್ಧಾರ ಮಾಡುವಂಥಾದ್ದು. ಮಾನ್ಯ ಸಭಾಧ್ಯಕ್ಷರೆ ತಾವು judge ಇದ್ದ ಹಾಗೆ. privilege ಆಗುತ್ತದೆ ಎನ್ನುವುದಕ್ಕೆ ನಾನು ತಮಗೆ ಮಾಹಿತಿ ಕೊಡುತ್ತಿದ್ದೇನೆ. ಇಲ್ಲಿ ಕುಳಿತು ಅವರ ಜೊತೆ ಊಟ ಮಾಡುತ್ತಿದ್ದಾರೆ. Accused convict ಅಲ್ಲವೆಂದು ನನಗೂ ಗೊತ್ತು. Accused ಜೊತೆಗೆ judges ಕುಳಿತು ಊಟ ಮಾಡುವುದಿಲ್ಲ. Accused ಜೊತೆ enquiry ಮಾಡುವ officers ಕುಳಿತು ಊಟ ಮಾಡುವುದಿಲ್ಲ. Accused ಜೊತೆ ಅವರು ವೇದಿಕೆಯನ್ನು share ಮಾಡುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಜೈಲು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದಾಗ ಖೈದಿಗಳ ಜೊತೆಗೆ ಇಸ್ಕಾನ್ ಸಂಸ್ಥೆಯವರ ಜೊತೆಗೆ ನಾವು ಊಟ ಮಾಡಿದ್ದೇವೆ. ಬಳ್ಳಾರಿಯಲ್ಲಿ ಹೇಳಿಕೆ ಕೊಟ್ಟಾಗ ಯಾವ ಅಧಿಕಾರಿಗಳು ಅಲ್ಲಿರಲಿಲ್ಲ. ಇಸ್ಕಾನ್ ಸಂಸ್ಥೆಯವರೂ ಅಲ್ಲಿ ಇರಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:– ನಾನು ನಿಮಗೆ ದಿನಾಂಕ ಹೇಳುತ್ತೇನೆ.. 22ನೇ ಮೇ 2007.

ಶ್ರೀ ಎಂ.ಪಿ.ಪ್ರಕಾಶ್:– ಅಷ್ಟೊತ್ತಿಗೆ ಕಾರ್ಯಕ್ರಮ ಜಾರಿಯಾಗಿತ್ತು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಅವೊತ್ತು ಎಲ್ಲಾ ಪತ್ರಿಕೆಗಳಲ್ಲಿ ನ್ಯೂಸ್ ಆಗಿದೆ.

ಶ್ರೀ ಎಂ.ಪಿ.ಪ್ರಕಾಶ್:– ನೀವು ಹೇಳುತ್ತಿರಬಹುದು, ಆದರೆ ಅಷ್ಟೊತ್ತಿಗೆ...

ಶ್ರೀ ಜೆ.ಸಿ.ಮಾಧುಸ್ವಾಮಿ:– ಸ್ವಲ್ಪ ಇರಿ ಸಾರ್, ನಾನು ಹೇಳುತ್ತೇನೆ. ಈ ಸಭೆ ಗೌರವ ಮುಖ್ಯ. ಯಾರಿಗೂ ಬೇಡ ಎಂದರೆ ನನಗೂ ಬೇಡ. ನಾನೇನು ಇದನ್ನು ತಲೆ ಮೇಲೆ ಹೊತ್ತುಕೊಳ್ಳುವುದಕ್ಕೆ ಈ ವಿಷಯ ರೈಸ್ ಮಾಡುತ್ತಿಲ್ಲ. ಈ ಸಭೆಯಲ್ಲಿ ಆಗಿರುವ ತೀರ್ಮಾನಕ್ಕೆ ತಾವು ಅಧ್ಯಕ್ಷರು, ಏನು ಅಪ್ಪಣೆ ಕೊಡುತ್ತೀರೋ ನನಗಷ್ಟೇ ಮುಖ್ಯ. ನಾನು ಅವೊತ್ತು ಮಾತನಾಡಿದ್ದೇನೆ. ನಾನು ಆ ವಿಷಯ ಇಲ್ಲಿ ಈಗ ಏಕೆ ಮಾತನಾಡುತ್ತಿಲ್ಲವೆಂದರೆ

I confine myself to the point that this is contempt of the House and breach of privilege. ಯಾವ ವ್ಯಕ್ತಿಯನ್ನು ತಮ್ಮ ಸಮಕ್ಷಮದಲ್ಲಿ ವಿಚಾರಣೆಗೊಳಪಡಿಸುತ್ತೇವೆ ಎಂದು ಹೇಳುತ್ತೀರ ಅವರಿಗೆ ಸರ್ಕಾರ ಮಣೆ ಹಾಕುತ್ತಿದೆಯೆಂದರೆ ಪ್ರಿವಿಲೇಜ್ ಆಗುತ್ತದೋ ಇಲ್ಲವೋ ಎಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಅಧ್ಯಕ್ಷರೆ ತಮಗೇ ನಾನು ಬಿಡುತ್ತೇನೆ. ಪ್ರಿವಿಲೇಜ್ ಆಗುವುದಿಲ್ಲವೆಂದರೆ ಈ ಸಭೆಗೆ ಬಿಟ್ಟಿದ್ದು. ಆದರೆ ಪ್ರಿವಿಲೇಜ್ ಮೂವ್ ಮಾಡುವುದು ನನ್ನ ಹಕ್ಕು. ಪ್ರಿವಿಲೇಜ್ ಅನ್ನೇ ಮಾಡಿ ಎಂದು ನಾನು ಕೇಳುವುದಕ್ಕಾಗುವುದಿಲ್ಲ. This House has to decide. ತಮಗೆ ಕೊಡುತ್ತೇನೆ ಅಧ್ಯಕ್ಷರೆ, ಈ ಎಲ್ಲಾ ಮಾಹಿತಿಗಳನ್ನು, ಅವರು ಮಾತನಾಡಿರುವುದು, ಮ್ಯಾನ್ಯುಯಲ್, ಇವೆಲ್ಲವನ್ನೂ ತಮಗೆ ಹಿಂದೆ ಕೊಟ್ಟಿದ್ದೇನೆ. ಮತ್ತೊಂದು ಸಲ ನಾನು ಅವುಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಅವೊತ್ತು ನಾನು ಮಾತನಾಡಿರುವ ವಿಷಯದಲ್ಲಿ ನನ್ನ ತಪ್ಪಿದ್ದರೆ ದಯಮಾಡಿ ಓಪನ್ ಮಾಡಿ ಇನ್ನೊಂದು ದಿವಸ, ಚರ್ಚೆ ಮಾಡೋಣ, ನಮಗೆ ಬಂದಿರುವ ಮಾಹಿತಿಗಳನ್ನೂ ನಾನು ಕೊಡುತ್ತೇನೆ. ಇವರ ಹತ್ತಿರ ಇರುವ ಮಾಹಿತಿಯನ್ನೂ ಇವರು ಕೊಡಲಿ. ನನಗೇನೂ ಬೇದ ಭಾವ ಇಲ್ಲವೇ ಇಲ್ಲ. ನನಗೆ ಬಂದಿರುವ ಮಾಹಿತಿ ಆಧಾರದ ಮೇಲೆ ನಾನು ಮಾತನಾಡುತ್ತೇನೆ. ಅವರಿಗೆ ಇರುವ ಮಾಹಿತಿಯ ಆಧಾರದ ಮೇಲೆ ಅವರು ಮಾತನಾಡಲಿ. This House has to decide who is right and who is wrong. ಮತ್ತೆ ನನಗೆ ಬರುವ ಎಲ್ಲಾ ಮಾಹಿತಿಗಳೂ ನೂರಕ್ಕೆ ನೂರು ಸತ್ಯ ಎಂದು ನಾನು ಮಾತನಾಡುವುದಕ್ಕೆ ಆಗುವುದಿಲ್ಲ. I am sitting in the opposition bench. ಸರ್ಕಾರ ನಡೆಸುವವರು ಅವೊತ್ತು ತಾವು ಡಿಫೆಂಡ್ ಮಾಡಬೇಕಾಗಿತ್ತು. ನೋಟಿಸ್ ಕೊಟ್ಟಿದ್ದೇವೆ, ಹೇಳಿದ್ದೇವೆ, ಅವೊತ್ತೇ ನೀವು ಹೇಳಬಹುದಾಗಿತ್ತು, ಇಲ್ಲಾ ಅಂಥ ಯಾವುದೇ ತಪ್ಪನ್ನು ಅವರು ಮಾಡಿಲ್ಲ ಎಂದು ನೀವು ಹೇಳಬಹುದಾಗಿತ್ತು. You accepted that there is some material in this argument and will enquire into the bona fides of the office ಎಂದು. ಇದೇ ರೀತಿ ನಾನು ವಿನಿವಿಂಕ್ ಮೇಲೂ ಚರ್ಚೆ ಮಾಡಿದೆ. ಅಲ್ಲಿ ಎನ್‌ಕ್ವೈರಿ ನೇಮಿಸಿದಿರಿ, ಆಚೆಗೆ ಅದರದ್ದೆಲ್ಲವನ್ನೂ ತೆಗೆದಿರಿ. ಆದರೆ ಇದರಲ್ಲಿ ಏಕೆ ಆ ರೀತಿ ನೀವು ಮಾಡುತ್ತಿಲ್ಲ. ನಾನು bias ಅಥವಾ

ನೀವು bias ಎಂದು ನೀವೇ ಹೇಳಬೇಕು. ನಾನೇನು ಎನ್‌ಕ್ವೈರಿ ಮಾಡಿಸುತ್ತೇನೆಂದು ಅವರ ಬಾಯಿಯೊಳಗೆ ಕುಳಿತುಕೊಂಡು ಹೇಳಿಸಲಿಲ್ಲ, ನನ್ನ ವಾದವನ್ನು ನಾನು ಮಾಡುತ್ತೇನೆ. I am here for that. ಈ ಸಭೆಯಲ್ಲಿ ತಮಗೇ ಕಳುಹಿಸುತ್ತಿದ್ದೇನೆ. ಈ ಸದನಕ್ಕೆ ಚ್ಯುತಿ ಬಂದರೆ ಈ ಶಾಸನ ಸಭೆ ಗೌರವ ಏನಾಗಬೇಕೆಂದು ತಾವು ತೀರ್ಮಾನ ಮಾಡಬೇಕು.

ಅಧ್ಯಕ್ಷರು:– ಆಯಿತು. ಈಗ ನಿಮ್ಮ ವಾದ ಮತ್ತು ಸರ್ಕಾರದ ಉತ್ತರ ಎರಡನ್ನೂ ನಾನು ಕೇಳಿದ್ದೇನೆ. ಇದರ ತೀರ್ಪನ್ನು ನಾನು ಕಾದಿರಿಸಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಿವಿಲೇಜ್ ಅನ್ನು ಮೂವ್ ಮಾಡಿದ್ದೇನೆ. ಕಂದಾಯ ಇಲಾಖೆ ಕಾರ್ಯದರ್ಶಿ ಬಗ್ಗೆ ನನ್ನದೊಂದು ಪ್ರಿವಿಲೇಜ್ ಇದೆ.

ಅಧ್ಯಕ್ಷರು:– ಅದನ್ನು ನಾನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದುದುಮ ಮಾನ್ಯ ಮುಖ್ಯಮಂತ್ರಿಗಳು ಕಳೆದ 28ನೇ ತಾರೀಖು ನಮ್ಮ ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಎಲ್ಲಾ ಸುತ್ತೋಲೆಗಳನ್ನು ವಾವಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೂ ಕೂಡ ಇವೊತ್ತಿನವರೆಗೆ ವಾಪಸ್ ತೆಗೆದುಕೊಂಡಿರುವ ಬಗ್ಗೆ ಆದೇಶಗಳು ಬಂದಿಲ್ಲ. ಆದುದರಿಂದ ಇಡೀ ಜಿಲ್ಲೆಯ ಜನರು ಮತ್ತೊಮ್ಮೆ ತಿರುಗಿ ಬೀಳುತ್ತಾರೆ.

ಅಧ್ಯಕ್ಷರು:– ಅದೇನು ಕಳುಹಿಸಿ. ನಾನು ಅದನ್ನು ನೋಡಿ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಈಗಲೇ ಅವಕಾಶ ಕೊಡಿ. ಏಕೆಂದರೆ ಇದು ಇಡೀ ಜಿಲ್ಲೆಯ ಸಮಸ್ಯೆಯಾಗಿದೆ. ಹನ್ನೆರಡು ದಿವಸ ಆಯಿತು. ಸದನದಲ್ಲಿ ಮುಖ್ಯಮಂತ್ರಿಗಳು...

ಅಧ್ಯಕ್ಷರು:– ಈಗ ನೀವು ಕುಳಿತುಕೊಳ್ಳಿ. ನಾನು ನಾಳೆ ತೆಗೆದುಕೊಳ್ಳುತ್ತೇನೆ. ಇನ್ನೂ ಈಗ ಬಹಳ ಮುಖ್ಯವಾದ ಬೇರೆ ಬೇರೆ ವಿಷಯಗಳು ಇವೆ.